PRGI NO : KNKAN/26/A0884

ಈ ನಮ್ಮ

# ಧೃತಿ ನ್ಯೂಸ್

E NAMMA DHURTHI NEWS KANNADA DAILY NEWS PAPER

ಸದೃಡತೆಯ ಹೆಜ್ಜೆಯೊಂದಿಗೆ..., ಕನ್ನಡ ದಿನಪತ್ರಿಕೆ

- ಕೊಪ್ಪಳ
- ವಿಜಯನಗರ
- ರಾಯಚೂರು
- ಬಳ್ಳಾರಿ
- ಗದಗ
- ಬಾಗಲಕೋಟೆ
- ಹಾವೇರಿ
- ಧಾರವಾಡ

ಸಂಪಾದಕರು: ಚಂದ್ರಕಾಂತ | ಸಂಪುಟ: 01 ಸಂಚಿಕೆ: 224 ಪುಟಗಳು: 04 ಬೆಲೆ: 02 ದಿನಾಂಕ: 24-10-2026 ಶನಿವಾರ | email: enammadhruthinews@gmail.com | Pho : 7353595904




# ಗಣಂಗೂರು ಟೋಲ್ ಬಳಿ ರೈತರ ಪ್ರತಿಭಟನೆ : ಸ್ಥಳಕ್ಕಾಗಮಿಸಿ ಮನವಿ ಸ್ವೀಕರಿಸಿದ ಸಚಿವ ಚಲುವರಾಯಸ್ವಾಮಿ

ಧೃತಿ ನ್ಯೂಸ್ ಸುದ್ದಿ



ಮಂಡ್ಯ: ರೈತರಿಗೆ ಶಕ್ತಿ ನೀಡುವ ಕೆಲಸದಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ. ಎಲ್ಲ ಪಕ್ಷಗಳು ಒಟ್ಟಾಗಿ ಕೇಂದ್ರ ಸರ್ಕಾರದ ಮುಂದೆ ರೈತರ ಸಮಸ್ಯೆಗಳನ್ನು ಪರಿಹರಿಸುವ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಹಾಗೂ ಜಲಸಂಪನೂಲ ಸಚಿವ ಎನ್. ಚಲುವರಾಯಸ್ವಾಮಿ ಆಶ್ವಾಸನೆ ನೀಡಿದರು.

ಕಬ್ಬಿನ ಬೆಲೆ ಏರಿಕೆ ಮಾಡುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇ-ರಿಸುವಂತೆ ಬೆಂಗಳೂರು-ಮೈಸೂರು ಹೆದ್ದಾ-ರಿಯಲ್ಲಿನ ಗಣಂಗೂರು ಟೋಲ್ ಪ್ಲಾಜಾದಲ್ಲಿ ರೈತರು ನಡೆಸುತ್ತಿದ್ದ ಪ್ರತಿಭಟನೆಯ ಸಂದರ್ಭದಲ್ಲಿ ಮಾತನಾಡಿದ ಅವರು, ರೈತರ ಬಹುತೇಕ ಬೇಡಿಕೆಗಳನ್ನು ಕೇಂದ್ರ ಸರ್ಕಾರ ಈಡೇ-ರಿಸಬೇಕು. ಹೀಗಾಗಿ ಸಿದ್ದರಾಮಯ್ಯ ಅವರ ಅವಧಿಯಲ್ಲಿ ಕೇಂದ್ರ ಸರ್ಕಾರದ ಬಳಿ ಸಾಕಷ್ಟು ಬಾರಿ ಮನವಿ ಮಾಡಿದ್ದೇವೆ. ಮೆಟ್ರೋ, ಜೆಜೆಎಂ ಅನುದಾನ, ಜಿಎಸ್‌ಟಿ ಹಣವನ್ನು ಸಹ ಕೇಂದ್ರ ಸರ್ಕಾರ ನೀಡುತ್ತಿಲ್ಲ. ಈ ಬಗ್ಗೆ ಅನೇಕ ಬಾರಿ ಕೇಂದ್ರ ಸರ್ಕಾರದ ಬಳಿ ಮನವಿ ಮಾಡಿದರೂ ಪ್ರಯೋಜನವಾಗುತ್ತಿಲ್ಲ. ಅಕ್ಕಪಕ್ಕದ ರಾಜ್ಯಗಳಿಗೆ ನೀಡುವ ಪ್ರಾಮುಖ್ಯತೆಯನ್ನು ನಮ ರಾಜ್ಯಕ್ಕೆ ನೀಡುತ್ತಿಲ್ಲ. ಕೇಂದ್ರ ಸರ್ಕಾರದ ಮಲತಾಯಿ ಧೋರಣೆಯಿಂದಾಗಿ ರೈತರ ಸಮಸ್ಯೆಗಳು ಇನ್ನಷ್ಟು ಜಟಿಲಗೊಳ್ಳುತ್ತಿವೆ ಎಂದು ಅವರು ಅಸಮಾಧಾನ ಹೊರಹಾಕಿದರು. ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದ ವೇಳೆ 79 ಸಾವಿರ ಕೋಟಿ ರೂ. ರೈತರ ಸಾಲ ಮನ್ನಾ ಮಾಡಿದ್ದರು. ಅದನ್ನು ಬಿಟ್ಟರೆ ಬಿಜೆಪಿ ನೇತೃತ್ವದ ಸರ್ಕಾರ ಸಾಲ ಮನ್ನಾ ಮಾಡಿಲ್ಲ. ರೈತರ ಹಿತದೃಷ್ಟಿಯಿಂದ ಕೇಂದ್ರ ಸರ್ಕಾರ ಯಾವುದೇ ಯೋಜನೆ ಜಾ-ರಿಗೊಳಿಸಿದರೂ, ರಾಜ್ಯ ಸರ್ಕಾರ ಶೇ. 50 ರಷ್ಟು ಪಾಲುದಾರರಾಗಿ ಸದಾ ರೈತರ ಬೆನ್ನಿಗೆ ನಿಲ್ಲುವ ಕೆಲಸ ಮಾಡಲಿದೆ ಎಂದರು.

ಹಾಲಿನ ದರ ಏರಿಕೆ ಸಂಬಂಧ ಈಗಾಗಲೇ ಸಂಪುಟದಲ್ಲಿ ಅನುಮೋದನೆ ದೊರೆತಿದೆ. ಚುನಾವಣಾ ನೀತಿಸಂಹಿತೆ ಮುಕ್ತಾಯಗೊಂಡ ತಕ್ಷಣವೇ ಹಾಲಿನ ದರ ಏರಿಕೆಯಾಗಲಿದೆ. ಯಾವ ಬೆಳೆಗೆ ಎಂಎಸ್‌ಪಿ ನೀಡಬೇಕು ಎಂಬುದನ್ನು ಕೇಂದ್ರ ಸರ್ಕಾರ ನಿರ್ಧಾರ ಮಾಡಲಿದೆ. ಹೀಗಾಗಿ ನಿಮ್ಮೆಲ್ಲರ ಸಹಕಾರವಿದ್ದರೆ, ಕೇಂದ್ರದ ಮೇಲೆ ಇನ್ನಷ್ಟು ಒತ್ತಡ ಹೇರಿ, ಆದಷ್ಟು ಶೀಘ್ರದಲ್ಲೇ ರೈತರ ಸಮಸ್ಯೆಗಳನ್ನು ಪರಿಹರಿಸಲು ನಿರಂತರ ಪ್ರಯತ್ನ ನಡೆಸಲಾಗುವುದು ಎಂದು ಅವರು ಹೇಳಿದರು. ನಿಮ್ಮೆಲ್ಲರ ಆಶೀರ್ವಾದದಿಂದ ನಾವು ಸರ್ಕಾರ ರಚಿಸಿದ್ದೇವೆ. ಇದಕ್ಕಾಗಿಯೇ ಬೆಳಗಾವಿಯಲ್ಲಿ ಈಗಾಗಲೇ ರೈತರ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸಲಾಗಿದೆ. ಎಲ್ಲ ಪಕ್ಷಗಳು ಒಟ್ಟಾಗಿ ರೈತರ ಸಮಸ್ಯೆಗಳನ್ನು ಕೇಂದ್ರ ಸರ್ಕಾರದ ಮುಂದಿಡಲು ನಿರ್ಧರಿಸಲಾಗಿದೆ. ನಾವು ರೈತರೊಂದಿಗೆ ಸದಾ ನಿಲ್ಲುತ್ತೇವೆ. ಕಬ್ಬಿಗೆ ನೀಡಬೇಕಿರುವ 100 ರೂ. ಪ್ರೋತ್ಸಾಹ ಧನದಲ್ಲಿ ಸಕ್ಕರೆ ಕಾರ್ಖಾನೆಗಳು 50 ರೂ. ಹಾಗೂ ರಾಜ್ಯ ಸರ್ಕಾರ 50 ರೂ. ನೀಡಬೇಕಿದೆ. ರಾಜ್ಯ ಸರ್ಕಾರ ತನ್ನ ಪಾಲನ್ನು ನೀಡುತ್ತಿದೆ. ಆದರೆ, ಸಕ್ಕರೆ ಕಾರ್ಖಾನೆಗಳು ನ್ಯಾಯಾಲಯದ ಮೂಲಕ ತಡೆಯಾಜ್ಞೆ ತಂದಿವೆ. ಈ ತಡೆಯಾಜ್ಞೆ ರದ್ದುಗೊಳಿಸಲು ರಾಜ್ಯ ಸರ್ಕಾರವು ನ್ಯಾಯಾಲಯದಲ್ಲಿ ಹೋರಾಟ ನಡೆಸುತ್ತಿದೆ ಎಂದು ಅವರು ವಿವರಿಸಿದರು.

**ಅ.26 ರಂದು ರೈತರೊಂದಿಗೆ ಸಭೆ:**

ಇದೇ 26 ರಂದು ರೈತರೊಂದಿಗೆ ಸಭೆ ನಡೆಸಿ, ಅವರ ಎಲ್ಲ ಸಮಸ್ಯೆಗಳನ್ನು ಪರಿಹ-ರಿಸಲಾಗುವುದು. ಇಳುವರಿ ಕಡಿಮೆಯಾಗುತ್ತಿರುವ ಬಗ್ಗೆ ರೈತರೇ ಒಂದು ನಿರ್ಧಾರಕ್ಕೆ ಬರಬೇಕು. ಉತ್ತರ ಹಾಗೂ ದಕ್ಷಿಣ ಭಾರತ ಎಂಬ ಕೇಂದ್ರ ಸರ್ಕಾರದ ತಾರತಮ್ಯವನ್ನು ತೊಡೆದುಹಾಕಲು ನಾನು ನಿಮೊಂದಿಗೆ ಹೋರಾಡುತ್ತೇನೆ ಎಂದು ಸಚಿವರು ಭರವಸೆ ನೀಡಿದರು.

ಸಚಿವರ ಭರವಸೆ ಬೆನ್ನಲೆ, ಪ್ರತಿಭಟನೆ ಹಿಂಪಡೆದ ರೈತರು :ಹೆದ್ದಾರಿಯಲ್ಲಿ ಟೋಲ್ ಪ್ಲಾಜಾ ತಡೆದು, ರಸ್ತೆ ತಡೆ ನಡೆಸುತ್ತಿದ್ದ ರೈತರ ಬಳಿ ಮನವಿ ಪತ್ರ ಸ್ವೀಕರಿಸಿದ ಸಚಿವರು, ಪ್ರತಿಭಟನಾಕಾರರನ್ನು ಸಮಾಧಾನಪಡಿಸಿ, ಪ್ರತಿಭಟನೆ ಹಿಂಪಡೆಯುವಂತೆ ಮಾಡುವಲ್ಲಿ ಯಶಸ್ವಿಯಾದರು.ಈ ವೇಳೆ ಶಾಸಕರಾದ ದರ್ಶನ್ ಪುಟ್ಟಣ್ಣಯ್ಯ, ರಮೇಶ್ ಬಂಡಿಸಿದ್ದೇಗೌಡ ಸೇ-ರಿದಂತೆ ರೈತ ಸಂಘಗಳ ಪದಾಧಿಕಾರಿಗಳು ಹಾಗೂ ರೈತರಿದ್ದರು.

## ಇರಕಲ್‌ಗಡಾದಲ್ಲಿ ರಾಷ್ಟ್ರೀಯ ಅಯೋಡಿನ್ ಕೊರತೆ ನಿಯಂತ್ರಣ ದಿನ ಮತ್ತು ಸಪ್ತಾಹ ಕಾರ್ಯಕ್ರಮ



ಧೃತಿ ನ್ಯೂಸ್ ಸುದ್ದಿ

ಕೊಪ್ಪಳ: ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕೊಪ್ಪಳ, ಜಿಲ್ಲಾ ಸರ್ವೇಕ್ಷಣಾ ಘಟಕ, ಕೊಪ್ಪಳ ಇವರ ಸಂಯುಕ್ತಾಶ್ರಯದಲ್ಲಿ ಅಕ್ಟೋಬರ್ 23 ರಂದು ಪ್ರಾಥಮಿಕ ಆರೋಗ್ಯ ಕೇಂದ್ರ ಇರಕಲ್ಲಗಡದಲ್ಲಿ "ರಾಷ್ಟ್ರೀಯ ಅಯೋಡಿನ್ ಕೊರತೆಯ ನ್ಯೂನ್ಯತೆಗಳ ನಿಯಂತ್ರಣ ದಿನ ಹಾಗೂ ಸಪ್ತಾಹ" ಅಂಗವಾಗಿ ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ನಂದಕುಮಾರ ಹೆಚ್. ಅವರು ಮಾತನಾಡಿ, ಅಯೋಡಿನ್ ಕೊರತೆಯಿಂದ ಮುಖ್ಯವಾಗಿ ಮಕ್ಕಳಲ್ಲಿ ಬುದ್ಧಿಮಾಂದ್ಯತೆ ಉಂಟಾಗುತ್ತದೆ. ಗರ್ಭಿಣಿ ಮಹಿಳೆಯರಲ್ಲಿ ಗರ್ಭಪಾತ ಮತ್ತು ಹುಟ್ಟುವ ಮಕ್ಕಳಲ್ಲಿ ಜನ್ಮಜಾತ ದೋಷಗಳು ಉಂಟಾಗುತ್ತವೆ. ಪ್ರತಿದಿನ ನಾವೆಲ್ಲರೂ ಅಯೋಡಿನ್‌ಯುಕ್ತ ಉಪ್ಪನ್ನು ಸೇವನೆ ಮಾಡಬೇಕು. ಸಮುದಾಯ ಮಟ್ಟದಲ್ಲಿ ಆರೋಗ್ಯ ಸಿಬ್ಬಂದಿಯವ-ರಿಂದ ಅಯೋಡಿನ್ ಕೊರತೆಯಿಂದ ಉಂಟಾಗುವ ನ್ಯೂನ್ಯತೆಗಳ ಬಗ್ಗೆ ಅರಿವು ಮೂಡಿಸುವುದರ ಬಗ್ಗೆ ತಿಳಿಸಿದರು. ಪ್ರತಿ ವರ್ಷ ಅಕ್ಟೋಬರ್ 21 ರಿಂದ 27 ರವರಗೆ "ರಾಷ್ಟ್ರೀಯ ಅಯೋಡಿನ್ ಕೊರತೆಯ ನ್ಯೂನ್ಯತೆಗಳ ನಿಯಂತ್ರಣ ದಿನ ಹಾಗೂ ಸಪ್ತಾಹ" ಕಾರ್ಯಕ್ರಮ ಆಚ-ರಿಸಲಾಗುತ್ತದೆ. ಮನುಷ್ಯನಿಗೆ ಬದುಕಲು ಮುಖ್ಯವಾಗಿ ನೀರು, ಗಾಳಿ ಹಾಗೂ ಆಹಾರ ಅತ್ಯಂತ ಅವಶ್ಯಕವಾಗಿ ಬೇಕಾಗುತ್ತದೆ. ಅದರಂತೆ ಪೌಷ್ಠಿಕ ಆಹಾರ ಸೇವಿಸುವುದರ ಜೊತೆಗೆ ಅಯೋಡಿನ್ ಅಂಶವಿರುವ ಉಪ್ಪನ್ನೇ ಬಳಸಬೇಕು. ಇದು ಮನುಷ್ಯನ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಅತಿ ಅವಶ್ಯಕವಾಗಿರುತ್ತದೆ. ಪ್ರತಿ ಒಬ್ಬರೂ ತಮ್ಮ ದಿನನಿತ್ಯದ ಆಹಾರದಲ್ಲಿ ಅಯೋಡಿನ್ ಅಂಶವಿರುವ ಉಪ್ಪನ್ನೇ ಬಳಸಬೇಕು. ಇದು ಮನುಷ್ಯನ ಬುದ್ಧಿಮಟ್ಟ ಹೆಚ್ಚಿಸಲು ಪ್ರಮುಖ ಪಾತ್ರ ವಹಿಸುತ್ತದೆ. ವಿಶೇಷವಾಗಿ ಗರ್ಭಿಣಿಯರು, ಹಾಲುಣಿಸುವ ತಾಯಂದಿರು, ಮಕ್ಕಳು ಹಾಗೂ ಹದಿ-ಹರೆಯದವರು ಕಡ್ಡಾಯವಾಗಿ ಅಯೋಡಿನ್ ಉಪ್ಪನ್ನೇ ಬಳಸಬೇಕು ಎಂದು ತಿಳಿಸಿದರು. ಅಯೋಡಿನ್ ಅಂಶವಿರುವ ಉಪ್ಪನ್ನು ಬಳಸದಿದ್ದರೆ ಗರ್ಭಿಣಿಯರಲ್ಲಿ ಪದೇ ಪದೇ ಗರ್ಭಪಾತ, ಸತ್ತು ಹುಟ್ಟುವ ಮಕ್ಕಳು ಸಂತಾನೋತ್ಪತ್ತಿಯಲ್ಲಿ ತೊಂದರೆ ಮತ್ತು ದೈಹಿಕ ಬೆಳವಣಿಗೆ ಕುಂಠಿತ, ವಯಸ್ಕರಲ್ಲಿ ನಿಶ್ಯಕ್ತಿ, ಕಾರ್ಯನಿರ್ವಹಣೆಯಲ್ಲಿ ವೈಫಲ್ಯತೆ, ಗಳಗಂಡರೋಗ ಉಂಟಾಗುತ್ತದೆ. ಮಕ್ಕಳಲ್ಲಿ ಬುದ್ಧಿಮಾಂದ್ಯತೆ, ಕಲಿಕೆಯಲ್ಲಿ ಹಿಂದುಳಿಯುವಿಕೆ, ಸರಿಪಡಿಸಲಾಗದ ದೈಹಿಕ ಮತ್ತು ಮಾನಸಿಕ ವಿಕಲತೆ, ಕುಂಠಿತ ಬೆಳವಣಿಗೆ, ಕಿವುಡು ಹಾಗೂ ಮೂಕತನ, ಮೆಳ್ಳಗಣ್ಣು, ಕುಬ್ಜತನ ಉಂಟಾಗುತ್ತದೆ. ಆದ್ದರಿಂದ ಮೇಲ್ಕಾಣಿಸಿದ ಗುಂಪಿನವರು ಅಯೋಡಿನ್ ಉಪ್ಪನ್ನು ಬಳಸಬೇಕೆಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳಾದ ದೇವಮ್ಮ, ಜಿಲ್ಲಾ ಸರ್ವೇಕ್ಷಣಾ ಘಟಕದ ಎಲ್.ವ್ಹಿ. ಸಜ್ಜನರ್, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳು ಹಾಗೂ ಜಿಲ್ಲಾ ಪ್ರಯೋಗಾಲಯದಿಂದ ತಾಂತ್ರಿಕ ಅಧಿಕಾರಿಗಳಾದ ಸುಧೀರ, ರಾಜ-ಕುಮಾರ, ಮೈಕ್ರೋಬಯಾಲಾಜಿಸ್ಟ್ ಹರ್ಷವರ್ಧನ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರದ ಸುರಕ್ಷತಾ ಅಧಿಕಾರಿಗಳು ಮತ್ತು ಸಿಬ್ಬಂದಿಯವರು ಪಾಲ್ಗೊಂಡಿದ್ದರು.

## ರೈತರ ಬೇಡಿಕೆಗಳಿಗೆ ಸ್ಪಂದಿಸದಿದ್ದರೆ ವಿಷ ಕೊಡಿ ಇಲ್ಲವೇ ಜನಸ್ನೇಹಿ ಪೊಲೀಸರಿಂದ ಗುಂಡಿಟ್ಟು ಕೊಲ್ಲಿ : ಮಲ್ಲನಗೌಡ ಎಸ್ ಕೋನನಗೌಡ್ರು

ಧೃತಿ ನ್ಯೂಸ್ ಸುದ್ದಿ



ಕುಕನೂರು: ತಾಲೂಕಿನ ರಾವಣಕಿ ಗ್ರಾಮದ ಹೈ ಟೆನ್ಶನ್ ಟವರ್ ವಿದ್ಯುತ್ ಸ್ಥಾವರ ಹಾಗೂ ಲೈನ್ ಎಳೆಯುವಲ್ಲಿ ರೈತರನ್ನು ವಂಚಿಸುತ್ತಿರುವ ಕಂಪನಿಗಳ ವಿರುದ್ಧ ಸ್ಥಳೀಯ ಶಾಸಕ ಹಾಗೂ ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರೆಡ್ಡಿಯವರು ರೈತರಿಗೆ ಸೂಕ್ತ ಪರಿಹಾರ ವಿತರಿಸುವಲ್ಲಿ ವಿಫಲರಾಗಿದ್ದು ರೈತರಿಗೆ ವಿಷ ಕೊಡಿ ಇಲ್ಲವೇ ನಿಮ್ಮ ಜನ ಸ್ನೇಹಿತ ಪೊಲೀಸ-ರಿಂದ ರೈತರನ್ನು ಗುಂಡಿಟ್ಟು ಕೊಲ್ಲಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ವಿದ್ಯುತ್ ಸ್ಥಾವರ ನಿರ್ಮಾಣ ಕಂಪನಿಗಳು ಮುಗ್ಧ ರೈತರನ್ನು ವಂಚಿಸಿ ಖಾಲಿ ಬಾಂಡ್ ಮೇಲೆ ರೈತರನ್ನು ಎದುರಿಸಿ ಬೆದರಿಸಿ ಸಹಿ ಮಾಡಿಸಿಕೊಂಡಿದ್ದು ನಮ್ಮ ಕೆಲಸಕ್ಕೆ ಅಡಚಣೆ ಉಂಟು ಮಾಡಿದರೆ ನಿಮ್ಮನ್ನು ಒಂದು ಒಳಗೆ ಹಾಕಿಸುತ್ತೇನೆ ಎನ್ನುವ ದರ್ಪದ ಮಾತುಗಳು ರೈತರನ್ನು ಕೆರಳಿಸಿದೆ. ರೈತರ ಬಗ್ಗೆ ಕಂಪನಿಗಳ ಗುಂಡಾವರ್ತನೆ ಅದಕ್ಕೆ ಅಧಿಕಾರಿಗಳ ಬೆಂಬಲ ರೈತರನ್ನು ಆತಂಕಕ್ಕೀಡು ಮಾಡಿದ್ದು ಸ್ಥಳೀಯ ಶಾಸಕರ ಮೌನ ಪರೋಕ್ಷ ಸಮ್ಮತಿಯಂತಿದೆ ಎಂದು ಹರಿಹಾಯ್ದರು. ಈ ವಿಷಯವಾಗಿ ಕೇಂದ್ರ ಸಚಿವರಾದ ಶ್ರೀ ಎಚ್ ಡಿ ಕುಮಾರಸ್ವಾಮಿಯವರು ರೈತರೊಂದಿಗೆ ಮಾತನಾಡಿದ್ದು ನಿಮ್ಮೊಂದಿಗೆ ನಾನಿದ್ದೇನೆ ಯಾವ ರೈತರು ಆತಂಕ ಪಡುವ ಅವಶ್ಯಕತೆ ಇಲ್ಲ ಎಂದು ಬೆಂಬಲ ವ್ಯಕ್ತಪಡಿಸಿ ಕೊಪ್ಪಳ ಜಿಲ್ಲಾಧಿಕಾರಿ ಹಾಗೂ ಪೊಲೀಸ್ ವ-ರಿಷ್ಠಾಧಿಕಾರಿಗಳಿಗೆ ರೈತರನ್ನು ಎದುರಿಸಿ ಬೆದರಿಸಿ ಒಪ್ಪಿಸದೆ ರೈತರನ್ನು ವಿಶ್ವಾಸಕ್ಕೆ ತೆಗೆದು ಕೊಂಡು ಕಾರ್ಯನಿರ್ವಹಿಸಲು ಸೂಚಿಸಿರುವದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಶ್ರೀ ಬಸವರಾಜ ಗೌರ ರವರು ರೈತ ಜಾಗೃತ ರಾಗದಿದ್ದರೆ ಇಂತಹ ಕಂಪನಿಗಳ ಅಟ್ಟಹಾಸ ಹೆಚ್ಚಾಗುತ್ತದೆ. ಕ್ಷೇತ್ರದ ಶಾಸಕ ಹಾಗೂ ಉನ್ನತ ಶಿಕ್ಷಣ ಸಚಿವರಾದ ಬಸವರಾಜ ರಾಯರೆಡ್ಡಿಯವರು ರೈತರ ಪರವಾಗಿ ಕಾರ್ಯನಿರ್ವಹಿಸಲು ಆಗ್ರಹಿಸಿದರು. ಮಾಜಿ ಜಿಲ್ಲಾ ಪಂಚಾಯತ್ ಸದಸ್ಯ ಅಶೋಕ್ ತೋಟದ ಮಾತನಾಡಿ ರೈತರ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ಮಾನ್ಯ ಸಚಿವರ ಗಮನಕ್ಕೆ ತಂದು ಸೂಕ್ತ ಪರಿಹಾರ ನೀಡಲು ವಿನಂತಿಸುತ್ತೇನೆ ಎಂದರು. ಮಾಜಿ ತಾಲೂಕು ಪಂಚಾಯತ್ ಉಪಾಧ್ಯಕ್ಷ ಕಳಕಪ್ಪ ಕಂಬಳಿ,ಯಲಬುರ್ಗಾ ಬಿಜೆಪಿ ಮಂಡಲ ಅಧ್ಯಕ್ಷ ಮಾರುತಿ ಹೊಸಮನಿ, ತಾಲೂಕು ಪಂಚಾಯತ್ ಮಾಜಿ ಅಧ್ಯಕ್ಷ ಶಿವಕುಮಾರ್ ನಾಗಲಪುರಮಠ ಮಾತನಾಡಿದರು.

ಈ ಸಂದರ್ಭದಲ್ಲಿ ರೈತರದ ಕರಿಯಪ್ಪ ಚೆನ್ನದಾಸರ್, ಮಂಜುನಾಥ ತಮ್ಮಣ್ಣವರ್, ನಾಗರಾಜ ಬಿರುಗಣ್ಣನವರ್, ಈರಣ್ಣ ಮಂಗಳಾಪುರ, ಶರಣಪ್ಪ ತಮ್ಮಣ್ಣವರ್, ಹನುಮಪ್ಪ ತಳವಾರ್, ವೀರೇಶ್ ದೊಡ್ಮನಿ, ಯಮನಪ್ಪ ವಾಲ್ಮೀಕಿ, ಮಾರುತಿ ಚನ್ನಾದಾಸರ ಹಾಗೂ ಇತರರು ಇದ್ದರು.

## ಸಿಂಗನಾಳ ಸಹಕಾರ ಸಂಘದಿಂದ ಆರ್‌ಡಿಸಿಸಿ ಬ್ಯಾಂಕ್ ಪ್ರತಿನಿಧಿಯಾಗಿ ಎನ್. ಚಂದ್ರಶೇಖರ್ ಗೌಡ ಆಯ್ಕೆ



ಧೃತಿ ನ್ಯೂಸ್ ಸುದ್ದಿ

ಕರಟಗಿ: ತಾಲೂಕಿನ ಸಿಂಗನಾಳ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ವತಿಯಿಂದ ಆರ್‌ಡಿಸಿಸಿ ಬ್ಯಾಂಕ್‌ನ ಮುಂದಿನ ಐದು ವರ್ಷಗಳ ಅವಧಿಗೆ ನಡೆಯಲಿರುವ ಚುನಾವಣೆಯಲ್ಲಿ ಮತದಾನ ಮಾಡುವ ಹಕ್ಕು ಹೊಂದಿರುವ ಪ್ರತಿನಿಧಿಯಾಗಿ ಹಾಗೂ ಚುನಾವಣಾ ಪ್ರಕ್ರಿಯೆಯಲ್ಲಿ ಸಂಘವನ್ನು ಪ್ರತಿನಿಧಿಸಲು ಸಂಘದ ನಿರ್ದೇಶಕ ಎನ್. ಚಂದ್ರಶೇಖರ್ ಗೌಡ ವೀರಭದ್ರಗೌಡ ಪಾಟೀಲ್ ಅವರನ್ನು ಸರ್ವಸದಸ್ಯರ ಸಮ್ಮುಖದಲ್ಲಿ ಆಯ್ಕೆ ಮಾಡಲಾಯಿತು.

ಸಂಘದ ಅಧ್ಯಕ್ಷರಾದ ಕರಿಯಪ್ಪ ಚಿಗರಿ ಅವರ ಸಮ್ಮುಖದಲ್ಲಿ ನಡೆದ ಆಯ್ಕೆ ಪ್ರಕ್ರಿಯೆಯಲ್ಲಿ ಸಂಘದ ಸದಸ್ಯರು ಒಮ್ಮತದಿಂದ ನಿರ್ಧಾರ ಕೈಗೊಂಡರು. ಈ ಸಂದರ್ಭದಲ್ಲಿ ಸಂಘದ ನಿರ್ದೇಶಕ ಸುರೇಶ ಗೋನಾಳ, ಆರ್‌ಡಿಸಿಸಿ ಬ್ಯಾಂಕ್‌ನ ಮಾಜಿ ಉಪಾಧ್ಯಕ್ಷ ಎಸ್. ಪಂಪಾಪತಿ, ಸಿದ್ದಪ್ಪ ಕಂಬಳಿ, ನಿಂಗಪ್ಪ ಹಟ್ಟಿ, ಕರಿಯಪ್ಪ ತಳವಾರ, ಯಂಕಮ್ಮ ಹಗಲ್ದಾಳ, ಹನುಮೇಶ ಬಸಪಟ್ಟಣ, ಸಂಘದ ಸದಸ್ಯ ಲಕ್ಷ್ಮಣ ಕುಂಟೋಜಿ, ಸಂಘದ ಕಾರ್ಯದರ್ಶಿ ಬಸವರಾಜ ಲಿಂಗರೆಡ್ಡಿ, ಹಾಲು ಉತ್ಪಾದಕರ ಸಂಘದ ಸಹಾಯಕ ಯಮನೂರ ಎಂ. ಸಿಂಗನಾಳ, ಮಾರುತಿ ಭೂಪುರ್, ಗಂಗಪ್ಪ ಹಟ್ಟಿ ಸೇರಿದಂತೆ ಗ್ರಾಮದ ಯುವಕರು ಹಾಗೂ ಸಂಘದ ಸದಸ್ಯರು ಉಪಸ್ಥಿತರಿದ್ದರು.

# ಕರ್ನಾಟಕ ಈಶಾನ್ಯ ಶಿಕ್ಷಕರ ಕ್ಷೇತ್ರ ಚುನಾವಣೆ–2026 ; ಕೊಪ್ಪಳ ಜಿಲ್ಲೆಯಲ್ಲಿ ಶೇ.92.59 ರಷ್ಟು ಮತದಾನ

ಧೃತಿ ನ್ಯೂಸ್ ಸುದ್ದಿ

ಕೊಪ್ಪಳ: ಕರ್ನಾಟಕ ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣೆಯ ಮತದಾನ ಪ್ರಕ್ರಿಯೆಯು ಅಕ್ಟೋಬರ್ 23ರಂದು ಯಶಸ್ವಿಯಾಗಿ ಮುಕ್ತಾಯಗೊಂಡಿದ್ದು, ಕೊಪ್ಪಳ ಜಿಲ್ಲೆಯ ವ್ಯಾಪ್ತಿಯಲ್ಲಿ ಒಟ್ಟಾರೆ ಶೇಕಡಾ 92.59 ರಷ್ಟು ದಾಖಲೆಯ ಮತದಾನವಾಗಿದೆ ಎಂದು ಜಿಲ್ಲಾಧಿಕಾರಿಗಳಾದ ಡಾ. ಸುರೇಶ ಬಿ. ಇಟ್ನಾಳ ಅವರು ತಿಳಿಸಿದ್ದಾರೆ.

ಕೊಪ್ಪಳ, ಗಂಗಾವತಿ, ಕಾರಟಗಿ, ಕನಕಗಿರಿ, ಕುಷ್ಟಗಿ, ಕುಕನೂರ ಮತ್ತು ಯಲಬುರ್ಗಾ ತಾಲೂಕುಗಳಲ್ಲಿನ ಮತಗಟ್ಟೆಗಳಲ್ಲಿ ಬೆಳಗ್ಗೆ 8 ಗಂಟೆಯಿಂದ ಆರಂಭವಾದ ಮತದಾನವು ಸಂಜೆ 4 ಗಂಟೆವರೆಗೆ ನಡೆಯಿತು. ಮತದಾರ ಶಿಕ್ಷಕರು ಉತ್ಸಾಹದಿಂದ ಮತಗಟ್ಟೆಗಳಿಗೆ ಆಗಮಿಸಿ ತಮ್ಮ ಮತದಾನದ ಹಕ್ಕು ಚಲಾಯಿಸಿದರು. ಕೊಪ್ಪಳ ಜಿಲ್ಲೆಯಲ್ಲಿ 1,845 ಪುರುಷರು ಮತ್ತು 869 ಮಹಿಳೆಯರು ಸೇರಿ ಒಟ್ಟು 2,714 ಮತದಾರರಿದ್ದಾರೆ. ಇದರಲ್ಲಿ 1,732 (ಶೇ.93.88) ಪುರುಷರು ಮತ್ತು 781 (ಶೆ.89.87) ಮಹಿಳೆಯರು ಒಳಗೊಂಡಂತೆ ಒಟ್ಟು 2,513 (ಶೇ.92.59) ಮತದಾರರು ಮತ ಚಲಾಯಿಸಿದ್ದಾರೆ.

ಶಾಂತಿಯುತ ಮತದಾನ: ಕೊಪ್ಪಳ ಜಿಲ್ಲೆಯ ಏಳು ತಾಲೂಕುಗಳಲ್ಲಿನ ಎಲ್ಲಾ 20 ಮತಗಟ್ಟೆಗಳಲ್ಲಿ ಶಾಂತಿಯುತ ಹಾಗೂ ವ್ಯವಸ್ಥಿತವಾಗಿ ಮತದಾನ ಜರುಗಿದೆ. ಜಿಲ್ಲಾಧಿಕಾರಿಗಳ ಭೇಟಿ: ಜಿಲ್ಲಾಧಿಕಾ-ರಿಗಳಾದ ಡಾ.ಸುರೇಶ ಇಟ್ನಾಳ ಅವರು ಈಶಾನ್ಯ



ಶಿಕ್ಷಕರ ಕ್ಷೇತ್ರದ ಮತಗಟ್ಟೆಗಳಾದ ಕೊಪ್ಪಳ ತಾಲೂಕು ಪಂಚಾಯತ್, ಕುಕನೂರು ಮತ್ತು ಅಳವಂಡಿಯಲ್ಲಿನ ಮತಗಟ್ಟೆಗಳಿಗೆ ಖುದ್ದು ಭೇಟಿ ನೀಡಿ ಪರಿಶೀಲಿಸಿದರು. ಹಂತ ಹಂತವಾಗಿ ಏರಿಕೆಯಾದ ಮತದಾನ: ಬೆಳಗ್ಗೆ 10 ಗಂಟೆಯವರೆಗೆ ಶೇ.12.42ರಷ್ಟು ಜನರು ಮತ ಚಲಾವಣೆ ಮಾಡಿದ್ದರು. ಮಧ್ಯಾಹ್ನ ವೇಳೆಗೆ ಮತದಾನ ಪ್ರಕ್ರಿಯೆ ಚುರುಕುಗೊಂಡಿತು. ಮಧ್ಯಾಹ್ನ 12 ಗಂಟೆ ವೇಳೆಗೆ ಶೇ.49.89 ರಷ್ಟು, ಮಧ್ಯಾಹ್ನ 2 ಗಂಟೆವರೆಗೆ ಮತದಾನದ ಪ್ರಮಾಣ ಗಣನೀಯ ಏರಿಕೆಯಾಗಿ ಶೇ.78.11ರಷ್ಟು ದಾಖಲಾಯಿತು. ಅಂತಿಮವಾಗಿ ಸಂಜೆ 4 ಗಂಟೆಗೆ ಮತದಾನ ಮುಕ್ತಾಯದ ವೇಳೆಗೆ ಒಟ್ಟು 2,513 ಮತಗಳು ಚಲಾವಣೆಯಾಗುವ ಮೂಲಕ ಶೇ.92.59 ರಷ್ಟು ದಾಖಲೆಯ ಮತದಾನವಾಯಿತು.

ತಾಲೂಕುವಾರು ಮತದಾನದ ವಿವರ: ಬೆಳಗ್ಗೆ 8 ಗಂಟೆಯಿಂದ ಮಧ್ಯಾಹ್ನ 4 ಗಂಟೆವರೆಗೆ ನಡೆದ ಮತದಾನದ ತಾಲೂಕುವಾರು ವಿವರ ಇಂತಿ-ದೆ. ಗಂಗಾವತಿ ತಾಲೂಕು: ಗಂಗಾವತಿ ತಾಲೂಕಿನ ಮತಗಟ್ಟೆ ಸಂಖ್ಯೆ 108ರಲ್ಲಿ ಒಟ್ಟು 236 ಪುರುಷ ಮತದಾರರ ಪೈಕಿ 223 ಮತದಾರರು ಹಾಗೂ ಒಟ್ಟು 161 ಮಹಿಳಾ ಮತದಾರರ ಪೈಕಿ 150 ಜನರು ಮತದಾನ ಮಾಡಿದ್ದಾರೆ. ಮತಗಟ್ಟೆ ಸಂಖ್ಯೆ 109ರಲ್ಲಿ ಒಟ್ಟು 63 ಪುರುಷ ಮತದಾರರ ಪೈಕಿ 60 ಮತದಾರರು ಹಾಗೂ ಒಟ್ಟು 23 ಮಹಿಳಾ ಮತದಾರರ ಪೈಕಿ 22 ಜನರು ಮತ ಚಲಾಯಿಸಿದ್ದಾರೆ. ಮತಗಟ್ಟೆ ಸಂಖ್ಯೆ 110ರಲ್ಲಿ ಒಟ್ಟು 46 ಪುರುಷ ಮತದಾರರ ಪೈಕಿ 45 ಮತದಾರರು ಹಾಗೂ ಒಟ್ಟು 28 ಮಹಿಳಾ ಮತದಾರರ ಪೈಕಿ 24 ಜನರು ಮತದಾನ ಮಾಡಿದ್ದಾರೆ.

ಕಾರಟಗಿ ತಾಲೂಕು: ಕಾರಟಗಿ ತಾಲೂಕಿನ ಮತಗಟ್ಟೆ ಸಂಖ್ಯೆ 111ರಲ್ಲಿ ಒಟ್ಟು 94 ಪುರುಷ ಮತದಾರರ ಪೈಕಿ 89 ಮತದಾರರು ಹಾಗೂ ಒಟ್ಟು 55 ಮಹಿಳಾ ಮತದಾರರ ಪೈಕಿ 49 ಜನರು ಮತದಾನ ಮಾಡಿದ್ದಾರೆ. ಮತಗಟ್ಟೆ ಸಂಖ್ಯೆ 112ರಲ್ಲಿ ಒಟ್ಟು 41 ಪುರುಷ ಮತದಾರರ ಪೈಕಿ 40 ಮತದಾರರು ಹಾಗೂ ಒಟ್ಟು 15 ಮಹಿಳಾ ಮತದಾರರ ಪೈಕಿ 13 ಜನರು ಮತದಾನ ಮಾಡಿದ್ದಾರೆ. ಕನಕಗಿರಿ ತಾಲೂಕು: ಕನಕಗಿರಿ ತಾಲೂಕಿನ ಮತಗಟ್ಟೆ ಸಂಖ್ಯೆ 113ರಲ್ಲಿ ಒಟ್ಟು 50 ಪುರುಷ ಮತದಾರರ ಪೈಕಿ 48 ಮತದಾರರು ಹಾಗೂ ಒಟ್ಟು 16 ಮಹಿಳಾ ಮತದಾರರ ಪೈಕಿ 15 ಜನರು ಮತದಾನ ಮಾಡಿದ್ದಾರೆ.

ಕುಷ್ಟಗಿ ತಾಲೂಕು: ಕುಷ್ಟಗಿ ತಾಲೂಕಿನ ಮತಗಟ್ಟೆ ಸಂಖ್ಯೆ 114ರಲ್ಲಿ ಒಟ್ಟು 97 ಪುರುಷ ಮತದಾರರ ಪೈಕಿ 88 ಮತದಾರರು ಹಾಗೂ ಒಟ್ಟು 51 ಮಹಿಳಾ ಮತದಾರರ ಪೈಕಿ 47 ಜನರು ಮತದಾನ ಮಾಡಿದ್ದಾರೆ. ಮತಗಟ್ಟೆ ಸಂಖ್ಯೆ 115ರಲ್ಲಿ ಒಟ್ಟು 77 ಪುರುಷ ಮತದಾರರ ಪೈಕಿ 67 ಮತದಾರರು ಹಾಗೂ ಒಟ್ಟು 15 ಮಹಿಳಾ ಮತದಾರರ ಪೈಕಿ 14 ಜನರು ಮತದಾನ ಮಾಡಿದ್ದಾರೆ. ಮತಗಟ್ಟೆ ಸಂಖ್ಯೆ 116ರಲ್ಲಿ ಒಟ್ಟು 63 ಪುರುಷ ಮತದಾರರ ಪೈಕಿ 62 ಮತದಾರರು ಹಾಗೂ ಒಟ್ಟು 11 ಮಹಿಳಾ ಮತದಾರರ ಪೈಕಿ 10 ಜನರು ಮತದಾನ ಮಾಡಿದ್ದಾರೆ. ಮತಗಟ್ಟೆ ಸಂಖ್ಯೆ 117ರಲ್ಲಿ ಒಟ್ಟು 98 ಪುರುಷ ಮತದಾರರ ಪೈಕಿ 91 ಮತದಾರರು ಹಾಗೂ ಒಟ್ಟು 17 ಮಹಿಳಾ ಮತದಾರರ ಪೈಕಿ 15 ಜನರು ಮತದಾನ ಮಾಡಿದ್ದಾರೆ. ಮತಗಟ್ಟೆ ಸಂಖ್ಯೆ 118ರಲ್ಲಿ ಒಟ್ಟು 58 ಪುರುಷ ಮತದಾರರ ಪೈಕಿ 58 ಮತದಾರರು ಹಾಗೂ ಒಟ್ಟು 22 ಮಹಿಳಾ ಮತದಾರರ ಪೈಕಿ 20 ಜನರು ಮತದಾನ ಮಾಡಿದ್ದಾರೆ.

ಕುಕನೂರು ತಾಲೂಕು: ಕುಕನೂರು ತಾಲೂಕಿನ ಮತಗಟ್ಟೆ ಸಂಖ್ಯೆ 119ರಲ್ಲಿ ಒಟ್ಟು 164 ಪುರುಷ ಮತದಾರರ ಪೈಕಿ 156 ಮತದಾರರು ಹಾಗೂ ಒಟ್ಟು 56 ಮಹಿಳಾ ಮತದಾರರ ಪೈಕಿ 53 ಜನರು ಮತದಾನ ಮಾಡಿದ್ದಾರೆ. ಮತಗಟ್ಟೆ ಸಂಖ್ಯೆ 120ರಲ್ಲಿ ಒಟ್ಟು 31 ಪುರುಷ ಮತದಾರರ ಪೈಕಿ 27 ಮತದಾರರು ಹಾಗೂ ಒಟ್ಟು 5 ಮಹಿಳಾ ಮತದಾರರ ಪೈಕಿ 5 ಜನರು ಮತದಾನ ಮಾಡಿದ್ದಾರೆ. ಯಲಬುರ್ಗಾ ತಾಲೂಕು: ಯಲಬುರ್ಗಾ ತಾಲೂಕಿನ ಮತಗಟ್ಟೆ ಸಂಖ್ಯೆ 121ರಲ್ಲಿ ಒಟ್ಟು 126 ಪುರುಷ ಮತದಾರರ ಪೈಕಿ 123 ಮತದಾರರು ಹಾಗೂ ಒಟ್ಟು 40 ಮಹಿಳಾ ಮತದಾರರ ಪೈಕಿ 33 ಜನರು ಮತದಾನ ಮಾಡಿದ್ದಾರೆ. ಮತಗಟ್ಟೆ ಸಂಖ್ಯೆ 122ರಲ್ಲಿ ಒಟ್ಟು 44 ಪುರುಷ ಮತದಾರರ ಪೈಕಿ 43 ಮತದಾರರು ಹಾಗೂ ಒಟ್ಟು 12 ಮಹಿಳಾ ಮತದಾರರ ಪೈಕಿ 12 ಜನರು ಮತದಾನ ಮಾಡಿದ್ದಾರೆ. ಕೊಪ್ಪಳ ತಾಲೂಕು: ಕೊಪ್ಪಳ ತಾಲೂಕಿನ ಮತಗಟ್ಟೆ ಸಂಖ್ಯೆ 123ರಲ್ಲಿ ಒಟ್ಟು 77 ಪುರುಷ ಮತದಾರರ ಪೈಕಿ 72 ಮತದಾರರು ಹಾಗೂ ಒಟ್ಟು 17 ಮಹಿಳಾ ಮತದಾರರ ಪೈಕಿ 15 ಜನರು ಮತದಾನ ಮಾಡಿದ್ದಾರೆ.

ಮತಗಟ್ಟೆ ಸಂಖ್ಯೆ 124ರಲ್ಲಿ ಒಟ್ಟು 58 ಪುರುಷ ಮತದಾರರ ಪೈಕಿ 54 ಮತದಾರರು ಹಾಗೂ ಒಟ್ಟು 18 ಮಹಿಳಾ ಮತದಾರರ ಪೈಕಿ 18 ಜನರು ಮತದಾನ ಮಾಡಿದ್ದಾರೆ. ಮತಗಟ್ಟೆ ಸಂಖ್ಯೆ 125ರಲ್ಲಿ ಒಟ್ಟು 353 ಪುರುಷ ಮತದಾರರ ಪೈಕಿ 324 ಮತದಾರರು ಹಾಗೂ ಒಟ್ಟು 260 ಮಹಿಳಾ ಮತದಾರರ ಪೈಕಿ 225 ಜನರು ಮತದಾನ ಮಾಡಿದ್ದಾರೆ. ಮತಗಟ್ಟೆ ಸಂಖ್ಯೆ 126ರಲ್ಲಿ ಒಟ್ಟು 34 ಪುರುಷ ಮತದಾರರ ಪೈಕಿ 30 ಮತದಾರರು ಹಾಗೂ ಒಟ್ಟು 14 ಮಹಿಳಾ ಮತದಾರರ ಪೈಕಿ 11 ಜನರು ಮತದಾನ ಮಾಡಿದ್ದಾರೆ. ಮತಗಟ್ಟೆ ಸಂಖ್ಯೆ 127ರಲ್ಲಿ ಒಟ್ಟು 35 ಪುರುಷ ಮತದಾರರ ಪೈಕಿ 32 ಮತದಾರರು ಹಾಗೂ ಒಟ್ಟು 33 ಮಹಿಳಾ ಮತದಾರರ ಪೈಕಿ 30 ಜನರು ಮತದಾನ ಮಾಡಿದ್ದಾರೆ.

ಈ ನಮ್ಮ ಧೃತಿ ನ್ಯೂಸ್
E NAMMA DHURTHI NEWS
KANNADA DAILY NEWS PAPER

## ಕಲಬುರಗಿ ಕೆಬಿಎಸ್ ಬ್ಯಾಂಕ್‌ನಲ್ಲಿ ನಕಲಿ ಚಿನ್ನ ಅಡವಿಟ್ಟು 76 ಲಕ್ಷಕ್ಕೂ ಹೆಚ್ಚು ಸಾಲ ಪಡೆದು ವಂಚನೆ




ಕಲಬುರಗಿ: ನಗರದ ಕೃಷ್ಣಾ ಸಮೃದ್ಧಿ (ಕೆಬಿಎಸ್) ಬ್ಯಾಂಕ್‌ನಲ್ಲಿ 700 ಗ್ರಾಂಗೂ ಅಧಿಕ ನಕಲಿ ಚಿನ್ನಾಭರಣ ಅಡವಿಟ್ಟು 76 ಲಕ್ಷಕ್ಕೂ ಹೆಚ್ಚು ಸಾಲ ಪಡೆದಿರುವ ವಂಚನೆ ಪ್ರಕರಣ ಬೆಳಕಿಗೆ ಬಂದಿದೆ.ಬ್ಯಾಂಕಿನ ವಾರ್ಷಿಕ ಆಡಿಟ್ ವೇಳೆ ನಕಲಿ ಚಿನ್ನಾಭರಣ ಅಡವಿಟ್ಟಿರುವುದು ಪತ್ತೆಯಾಗಿದ್ದು, ಈ ಸಂಬಂಧ ಬ್ಯಾಂಕ್ ಮ್ಯಾನೇಜರ್ ಹರ್ಷಾ ಕುಲಕರ್ಣಿ ಅವರು ಕಲಬುರಗಿಯ ಬ್ರಹ್ಮಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಬ್ಯಾಂಕಿನ ಮಾಜಿ ಮ್ಯಾನೇಜರ್ ಹಾಗೂ ಚಿನ್ನಾಭರಣಗಳ ಪರಿಶೀಲನೆ ನಡೆಸುತ್ತಿದ್ದ ಅಕ್ಕಸಾಲಿಗನ ವಿರುದ್ಧ ದೂರು ನೀಡಲಾಗಿದೆ. ನಕಲಿ ಚಿನ್ನಾಭರಣಗಳನ್ನು ಅಡವಿಟ್ಟು ಸಾಲ ಪಡೆಯುವಲ್ಲಿ ಇವರ ಪಾತ್ರವಿದೆಯೇ ಎಂಬುದರ ಕುರಿತು ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಪ್ರಕರಣದಲ್ಲಿ ದೊಡ್ಡ ಜಾಲ ಕಾರ್ಯನಿರ್ವಹಿಸಿರುವ ಸಾಧ್ಯತೆಯನ್ನೂ ಪೊಲೀಸರು ಪರಿಶೀಲಿಸುತ್ತಿದ್ದಾರೆ. ಬ್ಯಾಂಕಿನ ಆಂತರಿಕ ಪರಿಶೀಲನಾ ವ್ಯವಸ್ಥೆ ಹಾಗೂ ಭದ್ರತಾ ಕ್ರಮಗಳಲ್ಲಿನ ಲೋಪಗಳು ಕಂಡುಬಂದಿದೆ. ಇದೇ ವೇಳೆ, ಪ್ರಕರಣದ ದೂರುದಾರರಾಗಿರುವ ಪ್ರಸ್ತುತ ಬ್ಯಾಂಕ್ ಮ್ಯಾನೇಜರ್ ಹರ್ಷಾ ಕುಲಕರ್ಣಿ ಅವರ ವಿರುದ್ಧವೂ ಈ ಹಿಂದೆ ಗಂಭೀರ ಆರೋಪ ಕೇಳಿಬಂದಿರುವುದು ಪ್ರಕರಣಕ್ಕೆ ಮತ್ತೊಂದು ತಿರುವು ನೀಡಿದೆ. ಪ್ರಕರಣದ ಸಂಪೂರ್ಣ ತನಿಖೆಯ ಬಳಿಕವೇ ನಕಲಿ ಚಿನ್ನದ ವಂಚನೆಯ ರಹಸ್ಯ ಬಯಲಿಗೆ ಬರಲಿದೆ.

## ‘ಸ್ಟಿಂಗ್ ಆಪರೇಷನ್’ ಪ್ರಕರಣದಲ್ಲಿ ಬಂಧನ ಭೀತಿ ; ನಿರೀಕ್ಷಣಾ ಜಾಮೀನಿಗೆ ರಾಕೇಶ್ ಶೆಟ್ಟಿ ಯತ್ನ

ಬೆಂಗಳೂರು: ರಾಜ್ಯಾದ್ಯಂತ ತೀವ್ರ ಚರ್ಚೆಗೆ ಗ್ರಾಸವಾಗಿರುವ ಸ್ಟಿಂಗ್ ಆಪರೇಷನ್ ಸಂಬಂಧ ಖಾಸಗಿ ಸುದ್ದಿವಾಹಿನಿಯ ಮುಖ್ಯಸ್ಥ ರಾಕೇಶ್ ಶೆಟ್ಟಿಯನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸ್ಟಿಂಗ್ ಕಾರ್ಯಾಚರಣೆ ಸಂಬಂಧ ನೀಡಿದ್ದ ದೂರು ಆಧರಿಸಿ ತನಿಖೆ ನಡೆಸುತ್ತಿರುವ ಸಿಸಿಬಿಯ ಸೈಬರ್ ಅಪರಾಧ ಠಾಣೆ ಪೊಲೀಸರು ರಾಕೇಶ್ ಶೆಟ್ಟಿಯನ್ನು ನಿನ್ನೆ ವಿಚಾರಣೆ ನಡೆಸಿ ಮುಂದಿನ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿ ನೋಟೀಸ್ ಜಾರಿ ಮಾಡಿ ಕಳುಹಿಸಿದ್ದಾರೆ ಎಂದು ತಿಳಿದುಬಂದಿದೆ.



ಈ ಬೆನ್ನಲ್ಲೇ ಬಂಧನ ಭೀತಿಯಿಂದ ರಾಕೇಶ್ ಶೆಟ್ಟಿ 66ನೇ ಸಿಸಿಎಚ್ ಕೋರ್ಟ್‌ಗೆ ನಿರೀಕ್ಷಣಾ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದಾರೆ. ನಿರೀಕ್ಷಣಾ ಜಾಮೀನು ಕುರಿತ ಆದೇಶ ಕಾಯ್ದಿರಿಸಲಾಗಿದೆ. ಸ್ಟಿಂಗ್ ಆಪರೇಷನ್ ರಾಜ್ಯಾದ್ಯಂತ ಸಂಚಲನ ಮೂಡಿಸಿತ್ತು. ಸರ್ಕಾರ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದೆ. ಮೈಸೂರಿನ ಖಾಸಗಿ ಹೋಟೆಲ್‌ವೊಂದರಲ್ಲಿ ವಾಸ್ತವ್ಯ ಹೂಡಿದ್ದ ರಾಕೇಶ್‌ಶೆಟ್ಟಿ ಅವರನ್ನು ಪೊಲೀಸರು ಬುಧವಾರ ರಾತ್ರಿ ವಶಕ್ಕೆ ಪಡೆದು ನಿನ್ನೆ ಮುಂಜಾನೆ ನಗರಕ್ಕೆ ಕರೆತಂದು ವಿಚಾರಣೆ ನಡೆಸಿದ್ದಾರೆ ಎಂದು ತಿಳಿದುಬಂದಿದೆ.ಪ್ರಕರಣ ಸಂಬಂಧ ಈಗಾಗಲೇ ಸೈಬರ್ ಠಾಣೆ ಪೊಲೀಸರು ಹಲವರನ್ನು ವಶಕ್ಕೆ ಪಡೆದು ವಿಚಾರಣೆ ಕೂಡಾ ನಡೆಸಿ ಮಾಹಿತಿಗಳನ್ನು ಕಲೆ ಹಾಕಿದ್ದಾರೆ. ವಿವಾದಾತಕ ಸ್ಟಿಂಗ್ ಕಾರ್ಯಾಚರಣೆ ವಿಡಿಯೋಗಳ ಹಿಂದೆ ದೊಡ್ಡ ರಾಜಕೀಯ ಪಿತೂರಿ ಇದೆ. ಸ್ಟಿಂಗ್ ಕಾರ್ಯಾಚರಣೆಯ ಪ್ರಮುಖ ಆರೋಪಿ ರಾಕೇಶ್ ಶೆಟ್ಟಿ ಬಂಧಿಸುವಂತೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ನಗರ ಪೊಲೀಸ್ ಆಯುಕ್ತರು ಹಾಗೂ ಪೊಲೀಸ್ ಮಹಾನಿರ್ದೇಶಕರಿಗೆ ದೂರು ನೀಡಿ, ಪ್ರತಿಭಟನೆ ನಡೆಸಿ ಗಡುವು ಕೂಡಾ ನೀಡಿದ್ದರು. ವಿವಾದಿತ ವಿಡಿಯೋಗಳು ಹರಿದಾಡದಂತೆ ಬೆಂಗಳೂರು ನ್ಯಾಯಾಲಯ ಈಗಾಗಲೇ ಸುಮಾರು 42 ಮಾಧ್ಯಮ ಸಂಸ್ಥೆ ಹಾಗೂ ಡಿಜಿಟಲ್ ಫ್ಲ್ಯಾಟ್‌ಫಾರಂಗಳಿಗೆ ಮಧ್ಯಂತರ ತಡೆಯಾಜ್ಞೆ ನೀಡಿದೆ.

## ಅ.28 ರಂದು ಗಂಗಾವತಿಯಲ್ಲಿ ವಾಕ್ ಇನ್ ಇಂಟರ್ ವ್ಯೂವ್

ಕೊಪ್ಪಳ: ಗಂಗಾವತಿಯ ಹೊಸಳ್ಳಿ ರಸ್ತೆಯ ಹಳೆಯ ಸೇಲ್ಸ್ ಟ್ಯಾಕ್ಸ್ ಕಚೇರಿಯ ಎದುರುಗಡೆ ಇರುವ ಎಲ್&ಟಿ ಫೈನಾನ್ಸ್ ಅವರಿಂದ ಅಕ್ಟೋಬರ್ 28 ರಂದು ಗಂಗಾವತಿಯಲ್ಲಿ ವಾಕ್ ಇನ್ ಇಂಟರ್‌ವ್ಯೂವ್ ಅನ್ನು ಆಯೋಜಿಸಲಾಗಿದೆ.

ಪಿಯುಸಿ ಹಾಗೂ ಯಾವುದೇ ಪದವಿ ಪಡೆದ 18 ರಿಂದ 30 ವರ್ಷದೊಳಗಿನ ಅರ್ಹ ನಿರುದ್ಯೋಗಿ ಯುವಕ, ಯುವತಿಯರು ಈ ವಾಕ್ ಇನ್ ಇಂಟರ್‌ವ್ಯೂವ್ ನಲ್ಲಿ ಭಾಗವಹಿಸಬಹುದು. ಅಭ್ಯರ್ಥಿಗಳು ದೃಢೀಕರಿಸಲಾದ ತಮ್ಮ ವಿದ್ಯಾರ್ಹತೆಯ ಎಲಲ್ ಪ್ರಮಾಣ ಪತ್ರಗಳ 3 ಪ್ರತಿಗಳು, ಆಧಾರ್ ಕಾರ್ಡ್, ಬಯೋಡೆಟಾ ಹಾಗೂ ಪಾಸ್‌ಪೋರ್ಟ್ ಅಳತೆಯ 2 ಭಾವಚಿತ್ರಗಳೊಂದಿಗೆ ವಾಕ್ ಇನ್ ಇಂಟರ್‌ವ್ಯೂವ್ ನಲ್ಲಿ ಭಾಗವಹಿಸಿ ಉದ್ಯೋಗದ ನೆರವನ್ನು ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಜಿಲ್ಲಾ ಆಡಳಿತ ಭವನ, ಮೊದಲನೇ ಮಹಡಿ, ಕೊಪ್ಪಳ ಇವರನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ನಮ್ಮ ಧೃತಿ ನ್ಯೂಸ್
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.
ಮೊ: 7353595904

## 5,000 ಕೋಟಿ ಬಾಚುವ ನಿರೀಕ್ಷೆಯಲ್ಲಿ 2,000 ಕೋಟಿ ಬಜೆಟ್‌ನ ‘ರಾಮಾಯಣ’ ಚಿತ್ರ

ನವದೆಹಲಿ: ಭಾರತೀಯ ಚಿತ್ರರಂಗದ ಅತ್ಯಂತ ಮಹತ್ವಾಕಾಂಕ್ಷೆಯ ಚಿತ್ರಗಳಲ್ಲಿ ಒಂದೆಂದು ಪರಿಗಣಿಸಲಾಗಿರುವ ನಿತೇಶ್ ತಿವಾರಿ ನಿರ್ದೇಶನದ ‘ರಾಮಾಯಣ: ರೈಸ್ ಆಫ್ ಲೆಜೆಂಡ್’ ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ ಹೊಸ ದಾಖಲೆ ಬರೆಯುವ ನಿರೀಕ್ಷೆ ಮೂಡಿಸಿದೆ.

ಸುಮಾರು 2,000 ಕೋಟಿ ಬಜೆಟ್ ಹೊಂದಿದೆ ಎಂದು ವರದಿಯಾಗಿರುವ ಈ ಚಿತ್ರವು ಹೂಡಿಕೆಯನ್ನು ಸಮರ್ಥಿಸಿಕೊಳ್ಳಲು ಜಾಗತಿಕ ಮಟ್ಟದಲ್ಲಿ ಭಾರಿ ಗಳಿಕೆ ಮಾಡಬೇಕಾದ ಸವಾಲನ್ನು ಎದುರಿಸುತ್ತಿದೆ. ವ್ಯಾಪಾರ ವಿಶ್ಲೇಷಕರ ಅಂದಾಜಿನ ಪ್ರಕಾರ, ಚಿತ್ರದ ಬಜೆಟ್‌ಗೆ 2.5 ಪಟ್ಟು ಲೆಕ್ಕಾಚಾರ ಅನ್ವಯಿಸಿದರೆ, ವಿಶ್ವಾದ್ಯಂತ ಸುಮಾರು ?5,000 ಕೋಟಿ ಗಳಿಕೆಯ ಗುರಿ ಎದುರಾಗಬಹುದು.

**ಮುಂಗಡ ಟಿಕೆಟ್ ಮಾರಾಟದಿಂದ ?7.52 ಕೋಟಿ ಗಳಿಕೆ:**

ನಿನ್ನೆ ಮಧ್ಯಾಹ್ನದ ವೇಳೆಗೆ ಲಭ್ಯವಾದ ಸ್ಯಾಕ್ನಿಲ್ಕ್ ಅಂಕಿಅಂಶಗಳ ಪ್ರಕಾರ, ಭಾರತದಲ್ಲಿ 3,749 ಪ್ರದರ್ಶನಗಳ ಮೂಲಕ ಸುಮಾರು 1.33 ಲಕ್ಷ ಟಿಕೆಟ್‌ಗಳು ಮುಂಗಡವಾಗಿ ಮಾರಾಟವಾಗಿದ್ದು, ?7.52 ಕೋಟಿ ಸಂಗ್ರಹವಾಗಿತ್ತು. ಆದರೆ, ಹಲವು ಚಿತ್ರಮಂದಿರಗಳಲ್ಲಿ ಮುಂಗಡ ಬುಕ್ಕಿಂಗ್ ಇನ್ನೂ ಆರಂಭವಾಗಿರದ ಕಾರಣ, ಈ ಅಂಕಿಅಂಶಗಳನ್ನು ಅಂತಿಮ ಬೇಡಿಕೆಯ ಸೂಚಕವೆಂದು ಪರಿಗಣಿಸಲು ಸಾಧ್ಯವಿಲ್ಲ. ಚಿತ್ರದ ಆರಂಭಿಕ ಬಾಕ್ಸ್ ಆಫೀಸ್ ಪ್ರದರ್ಶನದ ಕುರಿತು ಮಾತನಾಡಿರುವ ವ್ಯಾಪಾರ ತಜ್ಞ ರಮೇಶ್ ಬಾಲಾ, ಮೊದಲ ದಿನ ಭಾರತದಲ್ಲಿ ?75?100 ಕೋಟಿ ಹಾಗೂ ಜಾಗತಿಕವಾಗಿ ?150?200 ಕೋಟಿ ಮುಂಗಡ ಮಾರಾಟವಾಗುವುದು ಚಿತ್ರದ ಪರವಾಗಿ ದೊಡ್ಡ ಆರಂಭಿಕ ಆವೇಗ ಸೃಷ್ಟಿಸಬಹುದು ಎಂದು ಅಭಿಪ್ರಾಯಪಟ್ಟಿದ್ದಾರೆ.




**ಮೊದಲ ದಿನವೇ 100 ಕೋಟಿ ನಿವ್ವಳ ಗಳಿಕೆಯ ನಿರೀಕ್ಷೆ:**

ಚಿತ್ರವು ಭಾರತದಲ್ಲಿ ಮೊದಲ ದಿನ ಕನಿಷ್ಠ ?100 ಕೋಟಿ ನಿವ್ವಳ ಗಳಿಕೆ ಮಾಡುವುದು ಉತ್ತಮ ಆರಂಭವಾಗಲಿದೆ ಎಂಬುದು ತಜ್ಞರ ಅಂದಾಜು. ಜಾಗತಿಕ ಮಟ್ಟದಲ್ಲಿ ಮೊದಲ ದಿನ ?175?200 ಕೋಟಿ ಗಳಿಕೆ ಮಾಡಿದರೆ, ಚಿತ್ರದ ಬೃಹತ್ ಬಜೆಟ್‌ಗೆ ತಕ್ಕಂತಹ ಆರಂಭ ಸಿಕ್ಕಂತಾಗುತ್ತದೆ ಎಂದು ವಿಶ್ಲೇಷಿಸಲಾಗಿದೆ. ಆದರೆ, ಆರಂಭಿಕ ಗಳಿಕೆಯೊಂದೇ ಚಿತ್ರದ ಯಶಸ್ಸನ್ನು ನಿರ್ಧರಿಸುವುದಿಲ್ಲ. ಪ್ರೇಕ್ಷಕರಿಂದ ಸಕಾರಾತ್ಮಕ ಪ್ರತಿಕ್ರಿಯೆ, ಉತ್ತಮ ಬಾಯಿಮಾತಿನ ಪ್ರಚಾರ ಹಾಗೂ ಬಿಡುಗಡೆಯ ನಂತರವೂ ಮುಂದುವರಿಯುವ ಟಿಕೆಟ್ ಮಾರಾಟ ಚಿತ್ರದ ದೀರ್ಘಕಾಲೀನ ಯಶಸ್ಸಿಗೆ ನಿರ್ಣಾಯಕವಾಗಲಿವೆ. ದಕ್ಷಿಣ ಭಾರತದ ಮಾರುಕಟ್ಟೆಯೂ ನಿರ್ಣಾಯಕ: ‘ರಾಮಾಯಣ’ ಚಿತ್ರದ ಗಳಿಕೆಯಲ್ಲಿ ದಕ್ಷಿಣ ಭಾರತದ ಮಾರುಕಟ್ಟೆಗಳು ಪ್ರಮುಖ ಪಾತ್ರ ವಹಿಸುವ ನಿರೀಕ್ಷೆಯಿದೆ. ಒಟ್ಟು ದೇಶೀಯ ಮುಂಗಡ ಟಿಕೆಟ್ ಮಾರಾಟದಲ್ಲಿ ದಕ್ಷಿಣ ಭಾರತದ ಪಾಲು ಶೇ.35?40ರಷ್ಟಿರಬೇಕು ಎಂದು ರಮೇಶ್ ಬಾಲಾ ಅಂದಾಜಿಸಿದ್ದಾರೆ. ಕರ್ನಾಟಕ ಮತ್ತು ತೆಲುಗು ರಾಜ್ಯಗಳಲ್ಲಿ ನಟ ಯಶ್ ಅವರ ಜನಪ್ರಿಯತೆ ಚಿತ್ರಕ್ಕೆ ನೆರವಾಗಬಹುದು ಎಂಬ ನಿರೀಕ್ಷೆಯೂ ಇದೆ. ಈ ಹಿಂದೆ ‘ಪುಷ್ಪ 2’ ಚಿತ್ರವು ದೇಶೀಯ ಮುಂಗಡ ಬುಕ್ಕಿಂಗ್‌ನಲ್ಲಿ ?91.24 ಕೋಟಿ ಸಂಗ್ರಹಿಸಿತ್ತು ಎಂದು ವರದಿಯಾಗಿದೆ. ಈ ದಾಖಲೆಯನ್ನು ಸರಿಗಟ್ಟುವುದು ಅಥವಾ ಮೀರಿಸುವುದು ‘ರಾಮಾಯಣ’ ತಂಡದ ಮುಂದಿರುವ ಪ್ರಮುಖ ಸವಾಲುಗಳಲ್ಲಿ ಒಂದಾಗಿದೆ.

**5,000 ಕೋಟಿ ಗಳಿಕೆಯ ಗುರಿ ಎಷ್ಟು ವಾಸ್ತವಿಕ**

ಸುಮಾರು ?2,000 ಕೋಟಿ ಬಜೆಟ್ ಮತ್ತು 2.5 ಪಟ್ಟು ಲೆಕ್ಕಾಚಾರವನ್ನು ಆಧರಿಸಿ ?5,000 ಕೋಟಿ ಜಾಗತಿಕ ಗಳಿಕೆಯ ಅಂದಾಜು ಮಾಡಲಾಗಿದೆ. ಆದರೆ, ಇದು ಅಧಿಕೃತವಾಗಿ ದೃಢಪಟ್ಟ ಲಾಭ–ನಷ್ಟದ ಸಮಬಿಂದು ಅಲ್ಲ. ಚಿತ್ರದ ನೈಜ ವೆಚ್ಚ, ವಿತರಕರೊಂದಿಗೆ ಆದಾಯ ಹಂಚಿಕೆ, ಮಾರುಕಟ್ಟೆ ವೆಚ್ಚ ಹಾಗೂ ಇತರ ಆದಾಯ ಮೂಲಗಳನ್ನು ಅವಲಂಬಿಸಿ ಲಾಭದ ಲೆಕ್ಕಾಚಾರ ಬದಲಾಗಬಹುದು. ಉಪಗ್ರಹ ಪ್ರಸಾರ ಹಕ್ಕುಗಳು, ಡಿಜಿಟಲ್ ಸ್ಟ್ರೀಮಿಂಗ್ ಹಕ್ಕುಗಳು ಮತ್ತು ಇತರ ವಾಣಿಜ್ಯ ಒಪ್ಪಂದಗಳಿಂದಲೂ ನಿರ್ಮಾಪಕರಿಗೆ ಆದಾಯ ದೊರೆಯಲಿದೆ. ಹೀಗಾಗಿ, ಚಿತ್ರವು ಲಾಭ ಗಳಿಸಲು ?5,000 ಕೋಟಿ ಬಾಕ್ಸ್ ಆಫೀಸ್ ಗಳಿಕೆಯೇ ಕಡ್ಡಾಯ ಎಂಬ ನಿರ್ಧಾರಕ್ಕೆ ಬರಲು ಸಾಧ್ಯವಿಲ್ಲ. ನವೆಂಬರ್ 5ರಂದು ಚಿತ್ರಮಂದಿರಗಳಿಗೆ ಲಗ್ಗೆ:

ರಣಬೀರ್ ಕಪೂರ್ ರಾಮನಾಗಿ, ಸಾಯಿ ಪಲ್ಲವಿ ಸೀತೆಯಾಗಿ, ರವಿ ದುಬೆ ಲಕ್ಷ್ಮಣನಾಗಿ ಹಾಗೂ ಯಶ್ ರಾವಣನಾಗಿ ಕಾಣಿಸಿಕೊಳ್ಳಲಿರುವ ‘ರಾಮಾಯಣ: ರೈಸ್ ಆಫ್ ಲೆಜೆಂಡ್’ ಚಿತ್ರವು ನವೆಂಬರ್ 5ರಂದು ಬಿಡುಗಡೆಯಾಗಲಿದೆ ಎಂದು ವರದಿಯಾಗಿದೆ. ನವೆಂಬರ್ 4ರಂದು ವಿಶ್ವಾದ್ಯಂತ ವಿಶೇಷ ಪೂರ್ವವೀಕ್ಷಣೆಗಳನ್ನು ಆಯೋಜಿಸುವ ಯೋಜನೆಯೂ ಇದೆ.

ಒಟ್ಟಿನಲ್ಲಿ, ಭಾರಿ ಬಜೆಟ್, ಬಹುತಾರಾಗಣ ಮತ್ತು ಜಾಗತಿಕ ಮಾರುಕಟ್ಟೆಯ ನಿರೀಕ್ಷೆಗಳೊಂದಿಗೆ ಸಿದ್ಧವಾಗಿರುವ ‘ರಾಮಾಯಣ’ ಭಾರತೀಯ ಚಿತ್ರರಂಗದ ಬಾಕ್ಸ್ ಆಫೀಸ್ ಸಾಮರ್ಥ್ಯಕ್ಕೆ ದೊಡ್ಡ ಪರೀಕ್ಷೆಯಾಗಲಿದೆ. ಚಿತ್ರದ ಆರಂಭಿಕ ಗಳಿಕೆ ಗಮನ ಸೆಳೆಯಬಹುದಾದರೂ, ಪ್ರೇಕ್ಷಕರ ಪ್ರತಿಕ್ರಿಯೆ ಮತ್ತು ಚಿತ್ರಮಂದಿರಗಳಲ್ಲಿ ಅದು ಎಷ್ಟು ಕಾಲ ಯಶಸ್ವಿಯಾಗಿ ಪ್ರದರ್ಶನ ಕಾಣುತ್ತದೆ ಎಂಬುದೇ ಅಂತಿಮ ಫಲಿತಾಂಶವನ್ನು ನಿರ್ಧರಿಸಲಿದೆ.

## ಸಿಇಸಿ ಜ್ಞಾನೇಶ್ ಕುಮಾರ್ ಪದಚ್ಯುತಿ ಕುರಿತು ಹೊಸ ನೋಟಿಸ್ ಬಂದರೆ ನಿಯಮಾನುಸಾರ ಪರಿಶೀಲನೆ : ಓಂ ಬಿರ್ಲಾ

ನವದೆಹಲಿ: ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಜ್ಞಾನೇಶ್ ಕುಮಾರ್ ಅವರನ್ನು ಪದಚ್ಯುತಗೊಳಿಸುವಂತೆ ಪ್ರತಿಪಕ್ಷಗಳು ಹೊಸದಾಗಿ ನೋಟಿಸ್ ಸಲ್ಲಿಸಿದರೆ, ಅದನ್ನು ಸಂವಿಧಾನಾತ್ಮಕ ನಿಯಮಗಳು ಮತ್ತು ನಿಗದಿತ ಕಾರ್ಯವಿಧಾನಗಳ ಪ್ರಕಾರ ಪರಿಶೀಲಿಸಲಾಗುವುದು ಎಂದು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ತಿಳಿಸಿದ್ದಾರೆ.

ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಜ್ಞಾನೇಶ್ ಕುಮಾರ್ ವಿರುದ್ಧ ಪ್ರತಿಪಕ್ಷಗಳಿಂದ ಹೊಸದಾಗಿ ಯಾವುದೇ ನೋಟಿಸ್ ಬಂದಿದೆಯೇ ಎಂಬ ಪ್ರಶ್ನೆಗೆ ಉತ್ತರಿಸಿದರು. “ಹೊಸ ನೋಟಿಸ್ ಬಂದರೆ, ನಿಯಮಗಳು ಮತ್ತು ಕಾರ್ಯವಿಧಾನಗಳ ಅಡಿಯಲ್ಲಿ ಅದನ್ನು ಪರಿಶೀಲಿಸುತ್ತೇವೆ. ಸೂಕ್ತ ಪ್ರಕ್ರಿಯೆಯನ್ನು ಅನುಸರಿಸಲಾಗುವುದು” ಎಂದು ಸ್ಪಷ್ಟಪಡಿಸಿದರು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಯೊಬ್ಬರಿಗೂ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಹಕ್ಕಿದೆ. ಆದರೆ, ಇಂತಹ ವಿಷಯಗಳನ್ನು ಸಂಸತ್ತಿನ ಮುಂದೆ ತಂದಾಗ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಹೇಳಿದರು. ನ್ಯಾಯಾಧೀಶರನ್ನು ಪದಚ್ಯುತಗೊಳಿಸಲು ನಿಗದಿಪಡಿಸಿರುವ ಪ್ರಕ್ರಿಯೆಯಂತೆಯೇ ಮುಖ್ಯ ಚುನಾವಣಾ ಆಯುಕ್ತರ ವಿರುದ್ಧವೂ ಪ್ರತ್ಯೇಕ ಸಾಂವಿಧಾನಿಕ ಪ್ರಕ್ರಿಯೆ ಇದೆ ಎಂದು ಬಿರ್ಲಾ ವಿವರಿಸಿದರು.

**ಎಸ್‌ಐಆರ್ ವಿರುದ್ಧ ಪ್ರತಿಪಕ್ಷಗಳ ಆಕ್ಷೇಪ:**

ದೇಶಾದ್ಯಂತ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯಲ್ಲಿ ಅಕ್ರಮಗಳು ಮತ್ತು ವ್ಯತ್ಯಾಸಗಳು ಸಂಭವಿಸುತ್ತಿವೆ ಎಂಬ ಆರೋಪವನ್ನು ಕಾಂಗ್ರೆಸ್ ನೇತೃತ್ವದ ಇಂಡಿಯಾ ಮೈತ್ರಿಕೂಟ ಮುಂದಿಟ್ಟಿದೆ. ಮತದಾರರ ಹೆಸರುಗಳನ್ನು ಕೈಬಿಡುವ ವಿಚಾರದಲ್ಲಿ ಚುನಾವಣಾ ಆಯೋಗದ ಕಾರ್ಯವೈಖರಿಯನ್ನು ಪ್ರಶ್ನಿಸುತ್ತಿರುವ ಪ್ರತಿಪಕ್ಷಗಳು, ಮುಖ್ಯ ಚುನಾವಣಾ ಆಯುಕ್ತರ ವಿರುದ್ಧ ಕ್ರಮ ಕೈಗೊಳ್ಳಬೇಕು ಮತ್ತು ಎಸ್‌ಐಆರ್ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಬೇಕು ಎಂದು ಒತ್ತಾಯಿಸುತ್ತಿವೆ. ವೋಟ್ ಚೋರಿ (ಮತಗಳ್ಳತನ) ಆರೋಪದ ಮೂಲಕ ಕೇಂದ್ರ ಸರ್ಕಾರದ ವಿರುದ್ಧ ರಾಜಕೀಯ ಒತ್ತಡ ಹೆಚ್ಚಿಸಲು ಪ್ರತಿಪಕ್ಷಗಳು ಮುಂದಾಗಿವೆ. ಈ ಸಂಬಂಧ ಪ್ರತಿಪಕ್ಷಗಳ ಹಲವು ನಾಯಕರು ಸುಪ್ರೀಂ ಕೋರ್ಟ್‌ನಲ್ಲಿಯೂ ಅರ್ಜಿ ಸಲ್ಲಿಸಿರುವುದಾಗಿ ವರದಿಯಾಗಿದೆ. ಸಿಇಸಿಯನ್ನು ಪದಚ್ಯುತಗೊಳಿಸುವ ಪ್ರಕ್ರಿಯೆ ಹೇಗೆ ಸಂವಿಧಾನದ ವಿಧಿ 324(5)ರ ಪ್ರಕಾರ, ಮುಖ್ಯ ಚುನಾವಣಾ ಆಯುಕ್ತರನ್ನು ಸುಪ್ರೀಂ ಕೋರ್ಟ್ ನ್ಯಾಯಾಧೀಶರನ್ನು ಪದಚ್ಯುತಗೊಳಿಸುವ ರೀತಿಯಲ್ಲಿಯೇ ಸಂಸತ್ತಿನ ನಿರ್ಣಯದ ಮೂಲಕ ತೆಗೆದುಹಾಕಬಹುದು. ಈ ಪ್ರಕ್ರಿಯೆಗೆ ಸಾಬೀತಾದ ದುರ್ವರ್ತನೆ ಅಥವಾ ಅಸಮರ್ಥತೆಯ ಆಧಾರ ಅಗತ್ಯವಾಗಿದ್ದು,



ಸಂಸತ್ತಿನ ಎರಡೂ ಸದನಗಳಲ್ಲಿ ವಿಶೇಷ ಬಹುಮತದ ಬೆಂಬಲ ದೊರೆಯಬೇಕು.

ಸಾಮಾನ್ಯವಾಗಿ, ಇಂತಹ ಪ್ರಸ್ತಾವನೆಗೆ ಸಂಬಂಧಿಸಿದಂತೆ ಸಂಸತ್ತಿನ ಒಟ್ಟು ಸದಸ್ಯರ ಬಹುಮತ ಮತ್ತು ಹಾಜರಿದ್ದು ಮತ ಚಲಾಯಿಸಿದ ಸದಸ್ಯರ ಕನಿಷ್ಠ ಮೂರನೇ ಎರಡರಷ್ಟು ಬೆಂಬಲ ಅಗತ್ಯವಾಗುತ್ತದೆ. ಆರೋಪಗಳ ತನಿಖೆ, ವರದಿ ಮತ್ತು ಸಂಸತ್ತಿನ ನಿರ್ಣಯ ಸೇರಿದಂತೆ ಕಾನೂನಿನಲ್ಲಿ ನಿಗದಿಪಡಿಸಿರುವ ಹಂತಗಳನ್ನು ಪೂರ್ಣಗೊಳಿಸಬೇಕಾಗುತ್ತದೆ. ಮುಖ್ಯ ಚುನಾವಣಾ ಆಯುಕ್ತರು ತಮ್ಮ ಹುದ್ದೆಗೆ ರಾಜೀನಾಮೆ ನೀಡುವುದಾದರೆ, ಅದನ್ನು ರಾಷ್ಟ್ರಪತಿಗಳಿಗೆ ಸಲ್ಲಿಸಬಹುದು. ಆದರೆ, ಪದಚ್ಯುತಿ ಪ್ರಕ್ರಿಯೆ ಮತ್ತು ಸ್ವಯಂಪ್ರೇರಿತ ರಾಜೀನಾಮೆ ಎರಡು ವಿಭಿನ್ನ ಕ್ರಮಗಳಾಗಿವೆ. ಎಸ್‌ಐಆರ್ ಪ್ರಕ್ರಿಯೆ, ಮತದಾರರ ಪಟ್ಟಿಯಲ್ಲಿನ ಬದಲಾವಣೆಗಳು ಮತ್ತು ಚುನಾವಣಾ ಆಯೋಗದ ಹೊಣೆಗಾರಿಕೆ ಕುರಿತು ಆಡಳಿತಾರೂಢ ಪಕ್ಷ ಹಾಗೂ ಪ್ರತಿಪಕ್ಷಗಳ ನಡುವೆ ವಾಗ್ವಾದ ಮುಂದುವರಿದಿದೆ. ಈ ನಡುವೆ, ಜ್ಞಾನೇಶ್ ಕುಮಾರ್ ವಿರುದ್ಧ ಹೊಸ ನೋಟಿಸ್ ಸಲ್ಲಿಸುವ ಕುರಿತು ಪ್ರತಿಪಕ್ಷಗಳು ಯಾವ ನಿರ್ಧಾರ ಕೈಗೊಳ್ಳಲಿವೆ ಎಂಬುದು ಕುತೂಹಲ ಮೂಡಿಸಿದೆ.

ಆದಾಗ್ಯೂ, ಹೊಸ ನೋಟಿಸ್ ಸಲ್ಲಿಕೆಯಾದರೂ ಅದರಿಂದ ತಕ್ಷಣವೇ ಪದಚ್ಯುತಿ ಪ್ರಕ್ರಿಯೆ ಪೂರ್ಣಗೊಳ್ಳುವುದಿಲ್ಲ. ಸಂವಿಧಾನ ಮತ್ತು ಸಂಬಂಧಿತ ಕಾನೂನುಗಳ ಅಡಿಯಲ್ಲಿ ನಿಗದಿಪಡಿಸಿರುವ ಪ್ರಕ್ರಿಯೆ ಪೂರ್ಣಗೊಳ್ಳುವುದು ಅನಿವಾರ್ಯವಾಗಿದೆ. ಓಂ ಬಿರ್ಲಾ ಅವರ ಹೇಳಿಕೆಯು ಈ ವಿಷಯದಲ್ಲಿ ನಿಯಮಬದ್ಧ ಕ್ರಮಕ್ಕೆ ಆದ್ಯತೆ ನೀಡಲಾಗುವುದು ಎಂಬ ಸಂದೇಶವನ್ನು ನೀಡಿದೆ.

## ಜ್ವರ ಎಂದು ವಾಣಿ ವಿಲಾಸ ಆಸ್ಪತ್ರೆಗೆ ಬಂದ 57 ದಿನದ ಕಂದಮ್ಮನ ಕಾಲು ಬೆರಳುಗಳೇ ಕಟ್

ಬೆಂಗಳೂರು: ಜ್ವರ ಬಂದಿದೆ ಎಂದು ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದ ಪೋಷಕರಿಗೆ ವೈದ್ಯರ ನಿರ್ಲಕ್ಷ್ಯದ ಶಂಕೆ ದೊಡ್ಡ ಆಘಾತವನ್ನೇ ತಂದಿದೆ. ಕೇವಲ 57 ದಿನಗಳ ಹಸುಗೂಸಿನ ಕಾಲಿನ ಬೆರಳುಗಳನ್ನೇ ಶಸ್ತ್ರಚಿಕಿತ್ಸೆ ಮೂಲಕ ಕತ್ತರಿಸಿ ತೆಗೆಯುವ ದುಸ್ಥಿತಿ ಎದುರಾಗಿದೆ. ಬೆಂಗಳೂರಿನ ವಾಣಿ ವಿಲಾಸ ಆಸ್ಪತ್ರೆಯಲ್ಲಿ ಈ ಘಟನೆ ನಡೆದಿದೆ ಎನ್ನಲಾಗಿದ್ದು, ವೈದ್ಯರ ವಿರುದ್ಧ ಪೋಷಕರು ಗಂಭೀರ ಆರೋಪ ಮಾಡಿದ್ದಾರೆ.

ಜ್ವರಕ್ಕೆ ಚಿಕಿತ್ಸೆ ಪಡೆಯಲು ಬಂದಿದ್ದ ಪೋಷಕರು
ಅಕ್ಟೋಬರ್ 15ರಂದು ಮಗುವಿಗೆ ಜ್ವರ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಪೋಷಕರು ವಾಣಿ ವಿಲಾಸ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದರು. ಈ ವೇಳೆ ಮಗುವನ್ನು ಪರೀಕ್ಷಿಸಿದ



ವೈದ್ಯರು ಜ್ವರಕ್ಕೆ ಔಷಧ ನೀಡಿದ್ದರು ಎನ್ನಲಾಗಿದೆ. ಬಳಿಕ ಮಗುವಿಗೆ ಐವಿ ಮೂಲಕ ಇಂಜೆಕ್ಷನ್ ನೀಡಲಾಗಿತ್ತು. ಆದರೆ, ಇಂಜೆಕ್ಷನ್ ನೀಡಿದ ನಂತರ ಮಗುವಿನ ಕಾಲಿನಲ್ಲಿ ಬದಲಾವಣೆ ಕಾಣಿಸಿಕೊಂಡಿದೆ ಎಂಬುದು ಪೋಷಕರ ಆರೋಪ. ನೋಡನೋಡುತ್ತಿದ್ದಂತೆ ನೀಲಿಗಟ್ಟಿದ ಕಾಲು!: ಇಂಜೆಕ್ಷನ್ ನೀಡಿದ ಬಳಿಕ ಮಗುವಿನ ಕಾಲು ನೀಲಿ ಬಣ್ಣಕ್ಕೆ ತಿರುಗಲಾರಂಭಿಸಿತ್ತು. ನಂತರ ಕಾಲಿನ ಸ್ಥಿತಿ ಮತ್ತಷ್ಟು ಹದಗೆಟ್ಟು, ಅಂಗಾಂಶಗಳು ಕೊಳೆಯಲಾರಂಭಿಸಿದವು ಎಂದು ಹೇಳಲಾಗಿದೆ. ಕೇವಲ ಜ್ವರಕ್ಕೆ ಚಿಕಿತ್ಸೆ ಪಡೆಯಲು ಬಂದಿದ್ದ ತಮ್ಮ ಮಗುವಿಗೆ ಇಂತಹ ಸ್ಥಿತಿ ಎದುರಾಗಿರುವುದನ್ನು ಕಂಡು ಪೋಷಕರು ಕಂಗಾಲಾಗಿದ್ದಾರೆ.

ಶಸ್ತ್ರಚಿಕಿತ್ಸೆ ಮೂಲಕ ಕಾಲ್ಬೆರಳುಗಳ ತೆರವು ಮಗುವಿನ ಕಾಲಿನ ಸ್ಥಿತಿ ಗಂಭೀರವಾದ ಹಿನ್ನೆಲೆಯಲ್ಲಿ ಕೊಳೆತಿದ್ದ ಕಾಲಿನ ಬೆರಳುಗಳನ್ನು ಶಸ್ತ್ರಚಿಕಿತ್ಸೆ ಮೂಲಕ ಕತ್ತರಿಸಿ ತೆಗೆಯಲಾಗಿದೆ ಎಂದು ತಿಳಿದುಬಂದಿದೆ. ಕಂದಮ್ಮನಿಗೆ ಇಷ್ಟು ಚಿಕ್ಕ ವಯಸ್ಸಿನಲ್ಲೇ ಇಂತಹ ದುಸ್ಥಿತಿ ಎದುರಾಗಿರುವುದು ಪೋಷಕರನ್ನು ತೀವ್ರ ಆತಂಕಕ್ಕೆ ದೂಡಿದೆ.

**ವೈದ್ಯರ ನಿರ್ಲಕ್ಷ್ಯವೇ ಕಾರಣವೇ:**

ಐವಿ ಇಂಜೆಕ್ಷನ್ ನೀಡಿದ ಬಳಿಕವೇ ಮಗುವಿನ ಕಾಲಿನ ಸ್ಥಿತಿ ಹದಗೆಟ್ಟಿದೆ ಎಂಬ ಪೋಷಕರ ಆರೋಪ ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಇಂಜೆಕ್ಷನ್ ನೀಡುವಾಗ ಅಥವಾ ನಂತರ ಯಾವುದೇ ವೈದ್ಯಕೀಯ ಲೋಪವಾಗಿದೆಯೇ? ಮಗುವಿನ ಕಾಲಿಗೆ ರಕ್ತಪೂರೈಕೆಯಲ್ಲಿ ತೊಂದರೆ ಉಂಟಾಗಲು ಕಾರಣವೇನು? ಸಮಸ್ಯೆ ಕಾಣಿಸಿಕೊಂಡ ತಕ್ಷಣ ಸೂಕ್ತ ಚಿಕಿತ್ಸೆ ನೀಡಲಾಗಿತ್ತೇ ಎಂಬ ಪ್ರಶ್ನೆಗಳಿಗೆ ಉತ್ತರ ಸಿಗಬೇಕಿದೆ.

ಜ್ವರದಂತಹ ಸಾಮಾನ್ಯ ಸಮಸ್ಯೆಗೆ ಚಿಕಿತ್ಸೆ ಪಡೆಯಲು ಬಂದಿದ್ದ 57 ದಿನದ ಮಗುವಿನ ಕಾಲ್ಬೆರಳುಗಳನ್ನು ಕತ್ತರಿಸುವ ಪರಿಸ್ಥಿತಿ ಎದುರಾಗಿರುವ ಪ್ರಕರಣವು ಆಸ್ಪತ್ರೆಯ ಚಿಕಿತ್ಸಾ ಕ್ರಮಗಳ ಬಗ್ಗೆ ಗಂಭೀರ ಪರಿಶೀಲನೆ ನಡೆಸುವ ಅಗತ್ಯತೆ ಎದುರಾಗಿದೆ.

# ಅಹಂಕಾರ ಏಕೆ

ಈ ವಿಶಾಲವಾದ ಸೃಷ್ಟಿಯಲ್ಲಿ ಪ್ರತಿಯೊಂದು ಜೀವಿಗೂ ತನ್ನದೇ ಆದ ಅಸ್ತಿತ್ವವಿದೆ. ಪ್ರತಿಯೊಂದು ಸಸ್ಯಕ್ಕೂ ತನ್ನದೇ ಆದ ಬದುಕಿದೆ. ಪ್ರಕೃತಿಯಲ್ಲಿರುವ ಬೆಟ್ಟ, ಗುಡ್ಡ, ನದಿ, ಸಮುದ್ರ, ಮರ, ಗಿಡ, ಪ್ರಾಣಿ, ಪಕ್ಷಿ ಹೀಗೆ ಪ್ರತಿಯೊಂದೂ ಪ್ರಕೃತಿಯ ನಿಯಮಕ್ಕೆ ಅನುಗುಣವಾಗಿ ಬದುಕುತ್ತವೆ. ಮರವು ತನ್ನ ನೆರಳನ್ನು ಎಲ್ಲರಿಗೂ ನೀಡುತ್ತದೆ. ನದಿ ತನ್ನ ನೀರನ್ನು ಭೇದಭಾವವಿಲ್ಲದೆ ಹರಿಸುತ್ತದೆ. ಸೂರ್ಯ ತನ್ನ ಬೆಳಕನ್ನು ಜಗತ್ತಿನ ಪ್ರತಿಯೊಂದು ಜೀವಿಗೂ ಹಂಚುತ್ತಾನೆ. ಹೂವು ತನ್ನ ಸೌಂದರ್ಯವನ್ನು ಪ್ರದರ್ಶಿಸಲು ಯಾರೊಂದಿಗೂ ಸ್ಪರ್ಧಿಸುವುದಿಲ್ಲ. ಪಕ್ಷಿಗಳು ತಮ್ಮ ಗೂಡುಗಳನ್ನು ಕಟ್ಟಿಕೊಳ್ಳುತ್ತವೆ; ಆದರೆ ಮತ್ತೊಂದು ಪಕ್ಷಿಯ ಗೂಡನ್ನು ನಾಶಮಾಡಿ ಸಂಭ್ರಮಿಸುವುದಿಲ್ಲ. ಪ್ರಕೃತಿಯ ಬಹುತೇಕ ಜೀವಿಗಳ ಬದುಕಿನಲ್ಲಿ ಮನುಷ್ಯನಲ್ಲಿರುವ ಅಹಂಕಾರ, ಪ್ರತಿಷ್ಠೆಯ ಹಪಾಹಪಿ ಮತ್ತು ಇನ್ನೊಬ್ಬರನ್ನು ತುಳಿದು ಮುಂದೆ ಸಾಗಬೇಕೆಂಬ ಮನೋಭಾವ ಕಾಣುವುದಿಲ್ಲ. ಆದರೆ ತನ್ನನ್ನು ತಾನು ಬುದ್ಧಿವಂತನೆಂದು ಕರೆದುಕೊಳ್ಳುವ ಮನುಷ್ಯ ಮಾತ್ರ ಅನೇಕ ಸಂದರ್ಭಗಳಲ್ಲಿ ತನ್ನ ಅಹಂಕಾರದ ಬಂಧನದಲ್ಲಿ ಸಿಲುಕಿ ಬದುಕುತ್ತಿದ್ದಾನೆ. ಹಾಗಾದರೆ ಮನುಷ್ಯನಿಗೆ ಈ ಅಹಂಕಾರ ಏಕೆ.

ಮನುಷ್ಯನಿಗೆ ವಿವೇಚನಾ ಶಕ್ತಿಯಿದೆ, ಆಲೋಚಿಸುವ ಸಾಮರ್ಥ್ಯವಿದೆ, ಒಳ್ಳೆಯದು ಮತ್ತು ಕೆಟ್ಟದ್ದನ್ನು ಗುರುತಿಸುವ ಬುದ್ಧಿಯಿದೆ. ತನ್ನ ಅನುಭವಗಳಿಂದ ಪಾಠ ಕಲಿತು ಬದುಕನ್ನು ಸುಂದರಗೊಳಿಸುವ ಅವಕಾಶವಿದೆ. ಆದರೂ ಮನುಷ್ಯ ತನ್ನ ಬುದ್ಧಿಶಕ್ತಿಯನ್ನು ಎಲ್ಲರ ಒಳಿತಿಗಾಗಿ ಬಳಸುವ ಬದಲು, ಕೆಲವೊಮ್ಮೆ ತನ್ನ ಸ್ವಾರ್ಥ, ದುರಹಂಕಾರ ಮತ್ತು ವೈಯಕ್ತಿಕ ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳಲು ಬಳಸುತ್ತಾನೆ. ತಾನು ಬೆಳೆದರೆ ಸಾಕು, ಇತರರು ಬೆಳೆಯಬಾರದು; ತನಗೆ ಗೌರವ ಸಿಕ್ಕರೆ ಸಾಕು, ಬೇರೆಯವರಿಗೆ ಗೌರವ ಸಿಗಬಾರದು; ತನ್ನನ್ನು ಹೊಗಳಿದರೆ ಸಂತೋಷಪಡುತ್ತಾನೆ, ಇನ್ನೊಬ್ಬರನ್ನು ಹೊಗಳಿದರೆ ಅಸೂಯೆಪಡುತ್ತಾನೆ. ಇಂತಹ ಮನೋಭಾವವೇ ಮಾನವ ಸಂಬಂಧಗಳಲ್ಲಿ ಬಿರುಕು ಮೂಡಿಸಿ ಸಮಾಜದಲ್ಲಿ ದ್ವೇಷದ ಬೀಜ ಬಿತ್ತುತ್ತದೆ. ಅಹಂಕಾರವೆಂಬುದು ಮನುಷ್ಯನ ವ್ಯಕ್ತಿತ್ವವನ್ನು ಒಳಗಿನಿಂದಲೇ ದುರ್ಬಲಗೊಳಿಸುವ ಮನೋವಿಕಾರ. ಜ್ಞಾನ, ಅಧಿಕಾರ, ಹಣ, ಸ್ಥಾನಮಾನ, ಜನಪ್ರಿಯತೆ ಅಥವಾ ಸಾಮಾಜಿಕ ಪ್ರಭಾವ ದೊರೆತಾಗ ಅವುಗಳೊಂದಿಗೆ ಜವಾಬ್ದಾರಿಯೂ ಹೆಚ್ಚುತ್ತದೆ. ಆದರೆ ಕೆಲವರು ಇವುಗಳನ್ನು ಸೇವೆಯ ಸಾಧನಗಳೆಂದು ಭಾವಿಸುವ ಬದಲು ತಮ್ಮ ಶ್ರೇಷ್ಠತೆಯನ್ನು ಪ್ರದರ್ಶಿಸುವ ಸಾಧನಗಳೆಂದು ಪರಿಗಣಿಸುತ್ತಾರೆ. ತಮ್ಮ ಮಾತೇ ಅಂತಿಮವಾಗಬೇಕು, ತಮ್ಮ ನಿರ್ಧಾರವನ್ನೇ ಎಲ್ಲರೂ ಒಪ್ಪಿಕೊಳ್ಳಬೇಕು, ತಮ್ಮ ಮುಂದೆ ಯಾರೂ ತಲೆ ಎತ್ತಬಾರದು ಎಂಬ ಮನೋಭಾವ ಬೆಳೆಸಿಕೊಳ್ಳುತ್ತಾರೆ. ಇಂತಹವರು ತಮ್ಮ ತಪ್ಪುಗಳನ್ನು ಒಪ್ಪಿಕೊಳ್ಳಲು ಸಿದ್ಧರಿರುವುದಿಲ್ಲ. ಬೇರೆಯವರ ಸಲಹೆಗಳನ್ನು ಸ್ವೀಕರಿಸುವುದಿಲ್ಲ. ತಮ್ಮನ್ನು ತಾವು ಪ್ರಶ್ನಿಸಿಕೊಳ್ಳುವುದಿಲ್ಲ. ಪರಿಣಾಮವಾಗಿ ಅವರ ಸುತ್ತಲೂ ಜನರಿದ್ದರೂ ಹೃದಯಪೂರ್ವಕ ಸಂಬಂಧಗಳು ಕಡಿಮೆಯಾಗುತ್ತವೆ.

ಮನುಷ್ಯನ ಮನಸ್ಸಿನಲ್ಲಿ ಅಹಂಕಾರದ ಜೊತೆಗೆ ದ್ವೇಷ, ಮತ್ಸರ, ಹಗೆತನ ಮತ್ತು ಹೊಟ್ಟೆಕಿಚ್ಚು ಮನೆಮಾಡಿದಾಗ ಬದುಕಿನ ನೆಮ್ಮದಿಯೇ ಕಳೆದುಹೋಗುತ್ತದೆ. ಇನ್ನೊಬ್ಬ ವ್ಯಕ್ತಿ ಸಾಧನೆ ಮಾಡಿದಾಗ ಸಂತೋಷಪಡುವ ಬದಲು ಆ ಸಾಧನೆಯನ್ನು ಹೇಗೆ ಕುಗ್ಗಿಸಬಹುದು ಎಂಬ ಆಲೋಚನೆ ಕೆಲವರಲ್ಲಿ ಮೂಡುತ್ತದೆ. ಬೇರೆಯವರು ಗೌರವ ಪಡೆದರೆ ಅದನ್ನು ಸಹಿಸಿಕೊಳ್ಳಲಾಗುವುದಿಲ್ಲ. ಯಾರಾದರೂ ಸಮಾಜದಲ್ಲಿ ಉತ್ತಮ ಹೆಸರು ಗಳಿಸಿದರೆ ಅವರ ವಿರುದ್ಧ ಅಪಪ್ರಚಾರ ಮಾಡಲು ಪ್ರಯತ್ನಿಸುತ್ತಾರೆ. ಇನ್ನೊಬ್ಬರ ಪ್ರಗತಿಯನ್ನು ತಮ್ಮ ಸೋಲಿನಂತೆ ಭಾವಿಸುತ್ತಾರೆ. ಇಂತಹ ಮನಸ್ಥಿತಿ ಹೊಂದಿರುವವರು ತಮ್ಮ ಬದುಕನ್ನು ಸುಧಾರಿಸಿಕೊಳ್ಳುವುದಕ್ಕಿಂತ ಬೇರೆಯವರ ಬದುಕಿನಲ್ಲಿ ತಪ್ಪುಗಳನ್ನು ಹುಡುಕುವುದರಲ್ಲೇ ಹೆಚ್ಚು ಸಮಯ ಕಳೆಯುತ್ತಾರೆ. ಆದರೆ ಒಂದು ಪ್ರಶ್ನೆಯನ್ನು ನಾವು ನಮ್ಮೊಳಗೆ ಕೇಳಿಕೊಳ್ಳಬೇಕು. ಇನ್ನೊಬ್ಬರ ಸಾಧನೆಯನ್ನು ಟೀಕಿಸುವುದರಿಂದ ನಮ್ಮ ಸಾಧನೆ ಹೆಚ್ಚುತ್ತದೆಯೇ? ಮತ್ತೊಬ್ಬರ ಗೌರವವನ್ನು ಕುಗ್ಗಿಸುವುದರಿಂದ ನಮ್ಮ ಗೌರವ ಬೆಳೆಯುತ್ತದೆಯೇ? ಇನ್ನೊಬ್ಬರ ಬದುಕಿನಲ್ಲಿ ದುಃಖವನ್ನುಂಟುಮಾಡುವುದರಿಂದ ನಮಗೆ ಶಾಶ್ವತ ಸಂತೋಷ ಸಿಗುತ್ತದೆಯೇ? ಖಂಡಿತವಾಗಿಯೂ ಇಲ್ಲ. ಬೇರೆಯವರನ್ನು ಕೆಳಗಿಳಿಸುವ ಪ್ರಯತ್ನದಲ್ಲಿ ನಮ್ಮದೇ ವ್ಯಕ್ತಿತ್ವ ಕುಸಿಯುತ್ತದೆ. ಮತ್ತೊಬ್ಬರ ಬೆಳವಣಿಗೆಯನ್ನು ತಡೆಯಲು ಪ್ರಯತ್ನಿಸುವಾಗ ನಮ್ಮ ಪ್ರಗತಿಗೆ ಬೇಕಾದ ಸಮಯ ಮತ್ತು ಶಕ್ತಿಯನ್ನು ನಾವೇ ವ್ಯರ್ಥಮಾಡಿಕೊಳ್ಳುತ್ತೇವೆ. ಅಸೂಯೆ ಇನ್ನೊಬ್ಬರ ಬದುಕನ್ನು ಸುಡುವ ಮೊದಲು ನಮ್ಮ ಮನಸ್ಸಿನ ಶಾಂತಿಯನ್ನೇ ಸುಡುತ್ತದೆ.

ಪ್ರಕೃತಿಯನ್ನು ಸೂಕ್ಷ್ಮವಾಗಿ ಗಮನಿಸಿದರೆ ಬದುಕಿನ ಅನೇಕ ಪಾಠಗಳು ನಮಗೆ ದೊರೆಯುತ್ತವೆ. ಒಂದು ಮರ ಮತ್ತೊಂದು ಮರದ ಬೆಳವಣಿಗೆಯನ್ನು ಕಂಡು ಅಸೂಯೆಪಡುವುದಿಲ್ಲ. ಹೂವೊಂದು ಮತ್ತೊಂದು ಹೂವಿನ ಸೌಂದರ್ಯವನ್ನು ಕಂಡು ತನ್ನ ಸೌಂದರ್ಯವನ್ನು ಕಳೆದುಕೊಳ್ಳುವುದಿಲ್ಲ. ನದಿಗಳು ಪರಸ್ಪರ ಸ್ಪರ್ಧಿಸಿ ತಮ್ಮ ಹರಿವನ್ನು ನಿಲ್ಲಿಸುವುದಿಲ್ಲ. ಪ್ರಕೃತಿಯಲ್ಲಿನ ವೈವಿಧ್ಯವೇ ಅದರ ಸೌಂದರ್ಯಕ್ಕೆ ಕಾರಣವಾಗಿದೆ. ಹಾಗೆಯೇ ಮನುಷ್ಯರಲ್ಲಿಯೂ ವಿಭಿನ್ನ ಪ್ರತಿಭೆಗಳು, ಆಲೋಚನೆಗಳು, ಸಾಮರ್ಥ್ಯಗಳು ಮತ್ತು ಸಾಧನೆಗಳಿರುತ್ತವೆ. ಪ್ರತಿಯೊಬ್ಬರೂ ಒಂದೇ ರೀತಿಯಲ್ಲಿ ಯೋಚಿಸಬೇಕು, ಒಂದೇ ರೀತಿಯಲ್ಲಿ ಬದುಕಬೇಕು, ಒಂದೇ ರೀತಿಯ ಯಶಸ್ಸು ಗಳಿಸಬೇಕು ಎಂದು ನಿರೀಕ್ಷಿಸುವುದು ಸರಿಯಲ್ಲ. ಇನ್ನೊಬ್ಬರ ವೈಶಿಷ್ಟ್ಯವನ್ನು ಗೌರವಿಸುವುದನ್ನು ಕಲಿತಾಗ ಮಾತ್ರ ನಮ್ಮ ವ್ಯಕ್ತಿತ್ವ ವಿಶಾಲವಾಗುತ್ತದೆ. ಸಮಾಜದಲ್ಲಿ ದ್ವೇಷ ಮತ್ತು ಮತ್ಸರ ಹೆಚ್ಚಾಗಲು ಹೋಲಿಕೆಯ ಮನೋಭಾವವೂ ಒಂದು ಪ್ರಮುಖ ಕಾರಣವಾಗಿದೆ. ನನ್ನ ಬಳಿ ಏನಿದೆ ಎಂಬುದಕ್ಕಿಂತ ಇನ್ನೊಬ್ಬರ ಬಳಿ ಏನಿದೆ ಎಂಬುದರ ಬಗ್ಗೆ ಹೆಚ್ಚು ಚಿಂತಿಸುವ ಪ್ರವೃತ್ತಿ ಬೆಳೆಯುತ್ತಿದೆ. ತನ್ನ ಪರಿಶ್ರಮ, ಪ್ರಾಮಾಣಿಕತೆ ಮತ್ತು ಸಾಧನೆಗಳ ಮೂಲಕ ತೃಪ್ತಿ ಕಂಡುಕೊಳ್ಳುವುದಕ್ಕಿಂತ ಮತ್ತೊಬ್ಬರ ಸ್ಥಾನಮಾನವನ್ನು ನೋಡಿ ತನ್ನ ಬದುಕನ್ನು ಅಳೆಯುವವರು ಹೆಚ್ಚಾಗುತ್ತಿದ್ದಾರೆ. ಈ ಹೋಲಿಕೆ ಅತೃಪ್ತಿಯನ್ನು ಹುಟ್ಟಿಸುತ್ತದೆ. ಅತೃಪ್ತಿ ಅಸೂಯೆಗೆ ದಾರಿ ಮಾಡಿಕೊಡುತ್ತದೆ. ಅಸೂಯೆ ದ್ವೇಷಕ್ಕೆ ಕಾರಣವಾಗುತ್ತದೆ. ಕೊನೆಗೆ ದ್ವೇಷವು ಮಾನವೀಯ ಸಂಬಂಧಗಳನ್ನು ನಾಶಮಾಡುತ್ತದೆ. ಈ ವಿಷವರ್ತುಲದಿಂದ ಹೊರಬರಬೇಕಾದರೆ ನಾವು ನಮ್ಮ ಬದುಕಿನ ಮೌಲ್ಯವನ್ನು ಬೇರೆಯವರ ಯಶಸ್ಸಿನೊಂದಿಗೆ ಹೋಲಿಸುವುದನ್ನು ನಿಲ್ಲಿಸಬೇಕು.

ಕುಟುಂಬದಿಂದ ಹಿಡಿದು ಸಾರ್ವಜನಿಕ ಜೀವನದವರೆಗೆ ಅಹಂಕಾರದ ಪರಿಣಾಮಗಳನ್ನು ಕಾಣಬಹುದು. ಕುಟುಂಬದಲ್ಲಿ ಪರಸ್ಪರ ಅರ್ಥಮಾಡಿಕೊಳ್ಳುವ ಗುಣ ಕಡಿಮೆಯಾದರೆ ಸಣ್ಣ ವಿಷಯಗಳೂ ದೊಡ್ಡ ವಿವಾದಗಳಾಗುತ್ತವೆ. ಸ್ನೇಹದಲ್ಲಿ ನಂಬಿಕೆಗಿಂತ ಅನುಮಾನ ಹೆಚ್ಚಾದರೆ ಸಂಬಂಧಗಳು ದೂರವಾಗುತ್ತವೆ. ಸಂಘಟನೆಗಳಲ್ಲಿ ಸೇವಾ ಮನೋಭಾವಕ್ಕಿಂತ ಅಧಿಕಾರದ ಹಪಾಹಪಿ ಹೆಚ್ಚಾದರೆ ಒಗ್ಗಟ್ಟು ಕುಸಿಯುತ್ತದೆ. ಸಾಹಿತ್ಯ, ಕಲೆ, ಸಾಮಾಜಿಕ ಸೇವೆ ಮತ್ತು ಸಾರ್ವಜನಿಕ ಜೀವನದಲ್ಲಿಯೂ ಪರಸ್ಪರ ಪ್ರೋತ್ಸಾಹಿಸುವ ಮನೋಭಾವದ ಬದಲು ಅಸೂಯೆ ಬೆಳೆದರೆ ಸೃಜನಶೀಲತೆ ಮತ್ತು ಸಾಮೂಹಿಕ ಪ್ರಗತಿಗೆ ಅಡ್ಡಿಯಾಗುತ್ತದೆ. ಸಮಾಜಕ್ಕಾಗಿ ದುಡಿಯುವವರು ತಮ್ಮ ವೈಯಕ್ತಿಕ ಪ್ರತಿಷ್ಠೆಗಿಂತ ಜನರ ಹಿತಕ್ಕೆ ಆದ್ಯತೆ ನೀಡಿದಾಗ ಮಾತ್ರ ಅವರ ಸೇವೆಗೆ ನಿಜವಾದ ಅರ್ಥ ಬರುತ್ತದೆ. ವಿಮರ್ಶೆ ಮಾಡುವುದು ತಪ್ಪಲ್ಲ. ತಪ್ಪನು ಗುರುತಿಸುವುದು ಸಮಾಜದ ಬೆಳವಣಿಗೆಗೆ ಅಗತ್ಯ. ಆದರೆ ವಿಮರ್ಶೆಯ ಹಿಂದೆ ಸತ್ಯವನ್ನು ತಿಳಿಸುವ ಉದ್ದೇಶವಿದೆಯೇ ಅಥವಾ ವ್ಯಕ್ತಿಯನ್ನು ಅವಮಾನಿಸುವ ಉದ್ದೇಶವಿದೆಯೇ ಎಂಬುದನ್ನು ಪರಿಶೀಲಿಸಬೇಕು. ವ್ಯಕ್ತಿಯ ತಪ್ಪನ್ನು ಸಾಕ್ಷ್ಯಾಧಾರಗಳೊಂದಿಗೆ ಗುರುತಿಸಿ ತಿದ್ದಿಕೊಳ್ಳಲು ಅವಕಾಶ ನೀಡುವುದು ಆರೋಗ್ಯಕರ ವಿಮರ್ಶೆ. ಆದರೆ ವೈಯಕ್ತಿಕ ದ್ವೇಷದಿಂದ ಸುಳ್ಳು ಆರೋಪಗಳನ್ನು ಮಾಡುವುದು, ವ್ಯಕ್ತಿಯ ಗೌರವಕ್ಕೆ ಧಕ್ಕೆ ತರುವುದು ಮತ್ತು ಅವರ ಪ್ರಗತಿಗೆ ಅಡ್ಡಿಪಡಿಸುವುದು ಅನಾರೋಗ್ಯಕರ ಮನೋಭಾವ. ಸತ್ಯವನ್ನು ಹೇಳುವ ಧೈರ್ಯ ಇರಬೇಕು; ಅದೇ ಸಮಯದಲ್ಲಿ ಸತ್ಯವನ್ನು ಹೇಳುವಾಗ ಮಾನವೀಯತೆಯನ್ನೂ ಕಾಪಾಡಬೇಕು. ಭಿನ್ನಾಭಿಪ್ರಾಯಗಳಿದ್ದರೂ ಪರಸ್ಪರ ಗೌರವಿಸುವ ಸಂಸ್ಕೃತಿ ಬೆಳೆಸಿಕೊಳ್ಳಬೇಕು.

ನಿಜವಾದ ದೊಡ್ಡತನವೆಂದರೆ ಇತರರಿಗಿಂತ ತಾನು ದೊಡ್ಡವನು ಎಂದು ಸಾಬೀತುಪಡಿಸುವುದಲ್ಲ. ತನ್ನಲ್ಲಿರುವ ಸಾಮರ್ಥ್ಯವನ್ನು ಸಮಾಜದ ಒಳಿತಿಗಾಗಿ ಬಳಸುವುದು, ತಪ್ಪು ಮಾಡಿದಾಗ ಒಪ್ಪಿಕೊಳ್ಳುವುದು, ಯಶಸ್ಸು ಸಿಕ್ಕಾಗ ವಿನಯದಿಂದ ಇರುವುದು ಮತ್ತು ಇತರರ ಸಾಧನೆಯನ್ನು ಮನಃಪೂರ್ವಕವಾಗಿ ಅಭಿನಂದಿಸುವುದೇ ನಿಜವಾದ ದೊಡ್ಡತನ. ಜ್ಞಾನ ಹೆಚ್ಚಾದಂತೆ ವಿನಯವೂ ಹೆಚ್ಚಾಗಬೇಕು. ಅಧಿಕಾರ ದೊರೆತಂತೆ ಜವಾಬ್ದಾರಿಯೂ ಹೆಚ್ಚಾಗಬೇಕು. ಗೌರವ ಸಿಕ್ಕಂತೆ ಇತರರನ್ನು ಗೌರವಿಸುವ ಗುಣವೂ ಬೆಳೆಯಬೇಕು. ಇವುಗಳಿಲ್ಲದಿದ್ದರೆ ಮನುಷ್ಯ ಎಷ್ಟೇ ಎತ್ತರಕ್ಕೆ ಬೆಳೆದರೂ ಅವನ ವ್ಯಕ್ತಿತ್ವದಲ್ಲಿ ಅಪೂರ್ಣತೆ ಉಳಿಯುತ್ತದೆ. ಬಸವಣ್ಣನವರ ಕಾಯಕ ಮತ್ತು ದಾಸೋಹದ ಚಿಂತನೆಗಳು ಮನುಷ್ಯನಿಗೆ ದುಡಿಮೆಯ ಗೌರವ, ಹಂಚಿಕೊಳ್ಳುವ ಗುಣ ಮತ್ತು ಸಮಾನತೆಯ ಮಹತ್ವವನ್ನು ಸಾರುತ್ತವೆ. ಕಾಯಕದಲ್ಲಿ ಪ್ರಾಮಾಣಿಕತೆ ಇರಬೇಕು; ಬದುಕಿನಲ್ಲಿ ಮಾನವೀಯತೆ ಇರಬೇಕು; ಸಮಾಜದಲ್ಲಿ ಸಮಾನತೆಯ ಮನೋಭಾವ ಇರಬೇಕು. ಮತ್ತೊಬ್ಬರ ಪರಿಶ್ರಮವನ್ನು ಗೌರವಿಸುವುದು, ಅವರ ಹಕ್ಕುಗಳನ್ನು ಒಪ್ಪಿಕೊಳ್ಳುವುದು ಮತ್ತು ಸಮಾಜದ ಒಳಿತಿಗಾಗಿ ಕೈಜೋಡಿಸುವುದು ಇಂದಿನ ಕಾಲದ ಅಗತ್ಯವಾಗಿದೆ. ಮನುಷ್ಯನ ಶ್ರೇಷ್ಠತೆ ಅವನ ಬಾಹ್ಯ ಆಡಂಬರದಲ್ಲಾಗಲಿ, ಅಧಿಕಾರದಲ್ಲಾಗಲಿ, ಸಂಪತ್ತಿನಲ್ಲಾಗಲಿ ಮಾತ್ರ ಇರುವುದಿಲ್ಲ. ಅವನ ನಡೆನುಡಿ, ಪ್ರಾಮಾಣಿಕತೆ, ಕರುಣೆ ಮತ್ತು ಪರೋಪಕಾರದ ಮನೋಭಾವದಲ್ಲಿದೆ.

ಇನ್ನು ಅಹಂಕಾರ, ದ್ವೇಷ, ಮತ್ಸರ, ಹಗೆತನ ಮತ್ತು ಹೊಟ್ಟೆಕಿಚ್ಚುಗಳಿಗೆ ಕೊನೆ ಇಲ್ಲವೇ ಎಂಬ ಪ್ರಶ್ನೆ ಎದುರಾಗುತ್ತದೆ. ಇವುಗಳಿಗೆ ಕೊನೆ ಬರಬೇಕಾದರೆ ಮೊದಲು ನಮ್ಮೊಳಗಿನ ಬದಲಾವಣೆ ಆರಂಭವಾಗಬೇಕು. ಜಗತ್ತನ್ನೇ ಬದಲಾಯಿಸಲು ಹೊರಡುವ ಮೊದಲು ನಮ್ಮ ಮನಸ್ಸನ್ನು ಪರಿಶೀಲಿಸಿಕೊಳ್ಳಬೇಕು. ಇನ್ನೊಬ್ಬರ ತಪ್ಪುಗಳನ್ನು ಎಣಿಸುವ ಮೊದಲು ನಮ್ಮ ತಪ್ಪುಗಳನ್ನು ಗುರುತಿಸಬೇಕು. ಬೇರೆಯವರನ್ನು ದೂಷಿಸುವ ಮೊದಲು ನಮ್ಮ ನಡೆನುಡಿಗಳನ್ನು ತಿದ್ದಿಕೊಳ್ಳಬೇಕು. ಅಸೂಯೆ ಮೂಡಿದಾಗ ಅದರ ಕಾರಣವನ್ನು ಅರಿತುಕೊಳ್ಳಬೇಕು. ಕೋಪ ಬಂದಾಗ ವಿವೇಕದಿಂದ ವರ್ತಿಸಬೇಕು. ದ್ವೇಷಕ್ಕೆ ಪ್ರತಿಯಾಗಿ ದ್ವೇಷವನ್ನೇ ನೀಡದೆ, ಸಾಧ್ಯವಾದಲ್ಲಿ ಸಂವಾದದ ಮೂಲಕ ಸಮಸ್ಯೆ ಪರಿಹರಿಸಬೇಕು. ಜೀವನ ಶಾಶ್ವತವಲ್ಲ. ಇಂದು ನಮ್ಮೊಂದಿಗೆ ಇರುವವರು ನಾಳೆ ಇರಬಹುದು ಅಥವಾ ಇರದಿರಬಹುದು. ನಾವು ಗಳಿಸಿದ ಸಂಪತ್ತು, ಅಧಿಕಾರ ಮತ್ತು ಸ್ಥಾನಮಾನಗಳಿಗಿಂತ ನಾವು ಬಿಟ್ಟುಹೋಗುವ ಒಳ್ಳೆಯ ನೆನಪುಗಳು ಹೆಚ್ಚು ಕಾಲ ಉಳಿಯುತ್ತವೆ. ಯಾರ ಮನಸ್ಸಿಗೂ ನೋವುಂಟುಮಾಡದೆ ಬದುಕುವುದು ಸಾಧ್ಯವಾಗದಿದ್ದರೂ, ಉದ್ದೇಶಪೂರ್ವಕವಾಗಿ ಇನ್ನೊಬ್ಬರನ್ನು ನೋಯಿಸದಿರುವ ಸಂಕಲ್ಪ ನಮ್ಮದಾಗಬೇಕು. ಯಾರಾದರೂ ಬೆಳೆಯುತ್ತಿದ್ದರೆ ಅವರನ್ನು ಪ್ರೋತ್ಸಾಹಿಸೋಣ. ಯಾರಾದರೂ ಸಂಕಷ್ಟದಲ್ಲಿದ್ದರೆ ನೆರವಾಗೋಣ. ಯಾರಾದರೂ ತಪ್ಪು ಮಾಡಿದರೆ ದ್ವೇಷದಿಂದಲ್ಲ, ತಿದ್ದಿಕೊಳ್ಳುವ ಅವಕಾಶ ನೀಡುವ ಮನೋಭಾವದಿಂದ ಪ್ರತಿಕ್ರಿಯಿಸೋಣ.

ಕೊನೆಗೆ, ಮನುಷ್ಯನು ತನ್ನ ಬುದ್ಧಿವಂತಿಕೆಯ ಬಗ್ಗೆ ಬೀಗುವುದಕ್ಕಿಂತ ತನ್ನ ಮಾನವೀಯತೆಯ ಬಗ್ಗೆ ಹೆಮ್ಮೆಪಡಲು ಕಲಿಯಬೇಕು. ಅಹಂಕಾರ ನಮ್ಮನ್ನು ಇತರರಿಂದ ದೂರಮಾಡುತ್ತದೆ; ವಿನಯ ನಮ್ಮನ್ನು ಹತ್ತಿರಮಾಡುತ್ತದೆ. ಅಸೂಯೆ ಮನಸ್ಸನ್ನು ಅಶಾಂತಗೊಳಿಸುತ್ತದೆ; ಪರಸ್ಪರ ಪ್ರೋತ್ಸಾಹ ಸಮಾಜವನ್ನು ಬಲಪಡಿಸುತ್ತದೆ. ದ್ವೇಷ ಸಂಬಂಧಗಳನ್ನು ಮುರಿಯುತ್ತದೆ; ಪ್ರೀತಿ ಮತ್ತು ಸಹಾನುಭೂತಿ ಅವುಗಳನ್ನು ಬೆಸೆಯುತ್ತವೆ. ಈ ಸತ್ಯವನ್ನು ಅರಿತುಕೊಂಡಾಗ ಮಾತ್ರ ಮನುಷ್ಯ ತನ್ನ ಬುದ್ಧಿಶಕ್ತಿಗೆ ತಕ್ಕಂತೆ ವಿವೇಕದಿಂದ ಬದುಕಲು ಸಾಧ್ಯ. ಪ್ರಶ್ನೆ ಇರುವುದು ಇಷ್ಟೇ: ನಾವು ಈ ಭೂಮಿಗೆ ಬಂದಿರುವುದು ಇನ್ನೊಬ್ಬರನ್ನು ಮೀರಿಸುವುದಕ್ಕಾಗಿಯೇ, ಅಥವಾ ನಮ್ಮ ಬದುಕಿನ ಮೂಲಕ ಜಗತ್ತಿಗೆ ಒಂದಿಷ್ಟು ಒಳಿತು ಮಾಡುವುದಕ್ಕಾಗಿಯೇ? ಈ ಪ್ರಶ್ನೆಗೆ ನಮ್ಮ ಮನಸ್ಸಾಕ್ಷಿಯೇ ಉತ್ತರಿಸಲಿ. ಅಹಂಕಾರವನ್ನು ಬಿಟ್ಟು ವಿನಯವನ್ನು ಅಪ್ಪಿಕೊಳ್ಳೋಣ; ದ್ವೇಷವನ್ನು ಬಿಟ್ಟು ಪ್ರೀತಿಯನ್ನು ಬೆಳೆಸೋಣ; ಅಸೂಯೆಯನ್ನು ಬಿಟ್ಟು ಪರಸ್ಪರ ಪ್ರೋತ್ಸಾಹಿಸೋಣ. ಏಕೆಂದರೆ ಮನುಷ್ಯನ ನಿಜವಾದ ಶ್ರೇಷ್ಠತೆ ಇತರರನ್ನು ಸೋಲಿಸುವುದರಲ್ಲಿ ಇಲ್ಲ; ತನ್ನೊಳಗಿನ ಕೆಟ್ಟ ಗುಣಗಳನ್ನು ಗೆಲ್ಲುವುದರಲ್ಲಿ ಅಡಗಿದೆ.



**ಸಂಗಮೇಶ ಎನ್. ಜವಾದಿ,**
**ಬರಹಗಾರರು, ಪರಿಸರವಾದಿ, ಬೀದರ ಜಿಲ್ಲೆ.**

# ಆತ್ಮವಿಶ್ವಾಸ ಹೊಂದಲು ಸ್ವಯಂತರ ಬೇತಿ

ನಾವು ನೋಡುವ ಕೆಲವು ಜನರು ಅತ್ಯಂತ ಆತ್ಮವಿಶ್ವಾಸದಿಂದ ವರ್ತಿಸುತ್ತಾರೆ. ಅವರ ನಡೆ ನುಡಿ, ಉಡುಗೆ ತೊಡುಗೆಗಳು, ಮಾತು, ಸಂವಹನ ಕೌಶಲ್ಯ ಹಾಗೂ ಸೂಕ್ಷ್ಮತನಗಳು ಅವರಲ್ಲಿರುವ ಆತ್ಮವಿಶ್ವಾಸವನ್ನು  ಎತ್ತಿ ತೋರುತ್ತವೆ. ಅಂತಹವರನ್ನು ನೋಡಿದಾಗ ಉಳಿದವರು ನಮಗೇಕೆ ಈ ರೀತಿಯ ಆತ್ಮ ವಿಶ್ವಾಸ ಇಲ್ಲ ಎಂದು ಬೇಸರ ಪಟ್ಟುಕೊಳ್ಳುತ್ತಾರೆ... ಮತ್ತೆ ಕೆಲವರು ಅಂತಹ ಆತ್ಮವಿಶ್ವಾಸ ತಮಗೂ ಇದ್ದರೆ ಅದೆಷ್ಟು ಚೆನ್ನ! ಎಂದು ಬಯಸುವುದು ಕೂಡ ಉಂಟು ಊಟ ಮಾಡಿದ್ದ ತಕ್ಷಣ ತಟ್ಟೆಯನ್ನು ಎತ್ತಿಕೊಂಡು ಒಯ್ದು ಅಡುಗೆ ಮನೆಯಲ್ಲಿ ಇಟ್ಟು ಬರುವುದಿಲ್ಲ ಆಕೆ... ಊಟ ಮಾಡುತ್ತಾ ತಾನು ಓದುತ್ತಿದ್ದ ಪೇಪರ್ ಅನ್ನು ಸಂಪೂರ್ಣವಾಗಿ ಓದಿ ಮುಗಿಸುವವರೆಗೆ ಆಕೆ ಎದ್ದು ಬರುವುದಿಲ್ಲ. ಇದನ್ನು ನಮ್ಮ ಮೆದುಳಿನಲ್ಲಿರುವ ಕೋಶಗಳು ಅರ್ಥ ಮಾಡಿಕೊಳ್ಳುತ್ತವೆ. ಇನ್ನು ಮುಂದೆಯೂ ಆಕೆ ಹಾಗೆಯೇ ಅದನ್ನು ನಿರ್ವಹಿಸಲು ಅನುವಾಗುವಂತೆ ತಮ್ಮನ್ನು ತಾವು ರೂಪಿಸಿಕೊಳ್ಳುತ್ತವೆ. ಇದು ಮೆದುಳಿನ ನೆನಪಿನ ಕೋಶಗಳು ನಮ್ಮನ್ನು ಅರಿತುಕೊಳ್ಳುವ ರೀತಿ. ನಮಗೆ ಬೇಕಿರಲಿ ಇಲ್ಲವೇ ಬೇಡವಾಗಿರಲಿ ಆದರೂ ಕೂಡ ನಾವು ಊಟವಾದ ತಕ್ಷಣ ಎದ್ದು ಹೋಗಿ ತಟ್ಟೆಯನ್ನು ಸಿಂಕ್ ನಲ್ಲಿ ಹಾಕಿ ಬಂದರೆ ನಮ್ಮ ಮೆದುಳಿನ ನರ ಕೋಶಗಳು ಅದನ್ನು ಗ್ರಹಿಸುತ್ತದೆ.

ನಿಜ ಹೇಳಬೇಕೆಂದರೆ ನಮ್ಮ ದೇಹ ಮತ್ತು ಬುದ್ಧಿಗಳಲ್ಲಿ ಆ ರೀತಿಯ ಒಂದು ವಿಶ್ವಾಸದ ಸೆಳಕು ಇದ್ದೇ ಇರುತ್ತದೆ. ಆದರೆ ನಮಗೆ ಅರಿವಿಲ್ಲವೇ ಅದರ ತಂತು ಕಡಿದು ಹೋಗಿರುತ್ತದೆ. ಆ ತಂತನ್ನು ಮತ್ತೆ ಮರುಜೋಡಿಸುವ ಮೂಲಕ ನಾವು ನಮ್ಮ ಆಲೋಚನೆ ಮತ್ತು ಕ್ರಿಯೆಗಳಲ್ಲಿ ಆತ್ಮವಿಶ್ವಾಸದ ಮರುಪೂರಣವನ್ನು ಮಾಡಿಕೊಳ್ಳಬೇಕು.

ಅತ್ಯಂತ ಚಿಕ್ಕ ಪುಟ್ಟ ನಡೆಗಳ ಮೂಲಕ ನಾವು ನಮ್ಮ ಮೆದುಳಿಗೆ ಈ ಕುರಿತು ತರಬೇತಿ ನೀಡಬೇಕು. ಆ ನಡೆಗಳು ನಮ್ಮನ್ನು ರೂಪಿಸುತ್ತದೆ.

*ದಾಟಲಾರದಂತಹ ಇತಿ ಮಿತಿಗಳನ್ನು ನಮಗೆ ನಾವೇ ಹಾಕಿಕೊಳ್ಳಬೇಕು. ನಮ್ಮ ಮೆದುಳಿನ ಮುಂಭಾಗದಲ್ಲಿರುವ ಕಾರ್ಟೆಕ್ಸ್ ಗಳು ಈ ರೀತಿಯಾಗಿ ಮಿತಿಗಳನ್ನು ಸರಿಯಾಗಿ ನಿರ್ವಹಿಸಲು ತಯಾರಾಗುತ್ತವೆ. ಈ ರೀತಿ ಮಾಡುವುದರಿಂದ



ಶೇಕಡ 35 ರಷ್ಟು ಒತ್ತಡದ ಹಾರ್ಮೋನುಗಳನ್ನು ದಮನಿಸಬಹುದು ಪ್ರತಿ ದಿನ ಕನಿಷ್ಠ ಎರಡು ಗಂಟೆಗಳ ಕಾಲ ಒಂದೇ ಕೆಲಸದಲ್ಲಿ ಆಳವಾಗಿ ತೊಡಗಿಕೊಳ್ಳಬೇಕು.

* ಅತ್ಯಂತ ಸ್ಪಷ್ಟವಾದ ಹಾಗೂ ಅಧಿಕಾರಯುತವಾದ ಧ್ವನಿಯಲ್ಲಿ ಮಾತನಾಡಬೇಕು. ನಮ್ಮ ಧ್ವನಿಯಲ್ಲಿನ ಅಧಿಕಾರದ ಭಾವ ಕೇಳುಗರ ನರವ್ಯೂಹದ ಕೋಶದ ಲ್ಲಿ ನಂಬಿಕೆಯನ್ನು ಉಂಟು ಮಾಡುತ್ತದೆ. ಆತ್ಮವಿಶ್ವಾಸವು ನಮ್ಮಲ್ಲಿ ಇರಬಹುದೇ? ಹೌದೇ ? ನೋಡುತ್ತೇನೆ ? ಎಂಬ ಭಾವ ಇರಕೂಡದು.

*ನಮ್ಮ ಮೆದುಳು ಗುಣಮಟ್ಟ ಹಾಗೂ ಅದರ ಇರವನ್ನು ಕುರಿತು ತನ್ನದೇ ಆದ ಒಂದು ಗ್ರಹಿಕೆಯನ್ನು ಹೊಂದಿರುತ್ತದೆ... ಆದ್ದರಿಂದ ನೀವು ನಿಮ್ಮ ಕುರಿತು ಏನನ್ನೇ ಯೋಚಿಸಿದರು ಅದಕ್ಕೆ ಶೇಕಡ 20ರಷ್ಟು ಹೆಚ್ಚು ನಿಮ್ಮದಾಗಿ ಯೋಚಿಸಿ.

*ನಿಮಗೆ ನೀವೇ ಕೆಲವು ಪ್ರಮಾಣಗಳನ್ನು ಮಾಡಿಕೊಂಡು ಅವುಗಳನ್ನು ನಿಭಾಯಿಸಿ. ನಿಮ್ಮ ಮೇಲೆ ನಿಮಗೆ ನಂಬಿಕೆ ಬೆಳೆಯಲು ಡೋಪ ಮೈನ್ ಎಂಬ ಹಾರ್ಮೋನ್ ಕಾರ್ಯ ನಿರ್ವಹಿಸುತ್ತದೆ... ಅದರ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ನಿಮ್ಮ ಕ್ಷಮತೆಯನ್ನು ಹೆಚ್ಚಿಸಬೇಕು. ನಿಮಗೆ ನೀವೇ ಬದ್ಧರಾಗಿ ನಿಮ್ಮ ಬಲವನ್ನು ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳಬೇಕು. ಇದು ನಿಮ್ಮ ಆತ್ಮ ಆತ್ಮ ಬಲವನ್ನು ಹೆಚ್ಚಿಸುತ್ತದೆ. ಪ್ರತಿದಿನ ನಿಮ್ಮ ಮೂರು ಅತ್ಯಂತ ಆಪ್ತವಾದ ಚಟುವಟಿಕೆಗಳಿಗೆ ಸಮಯವನ್ನು ಮೀಸಲಿಡಿ.

*ಇತರರ ಬೆಳವಣಿಗೆಯನ್ನು ಸಂತೋಷದಿಂದ ಸ್ವೀಕರಿಸಿ. ಉತ್ತಮವಾದ ಸಮೃದ್ಧಿಯ ಮನಸ್ಥಿತಿಯು ನಮ್ಮ ಮೆದುಳಿನ ಕೋಶಗಳನ್ನು ಬೆಳವಣಿಗೆಯ ನಿಟ್ಟಿನಲ್ಲಿ ಕಾರ್ಯ ಶೀಲವಾಗುವಂತೆ ಆಕರ್ಷಿಸುತ್ತದೆ.

ಧನಾತ್ಮಕವಾದ ಗುರುತಿಸಿಕೊಳ್ಳುವಿಕೆ ಸಾಮಾಜಿಕ ಬಂಧಗಳನ್ನು ಹೆಚ್ಚಿಸುತ್ತದೆ.. ಆದ್ದರಿಂದ ಪ್ರತಿದಿನ ನಿಮಗೆ ನೀವು ಕನಿಷ್ಠ ಮೂರು ವಿಷಯಗಳನ್ನು ಸಾಧಿಸಲೇಬೇಕು.

* ನಾಟಕೀಯವಾದಂತಹ ವಸ್ತು, ವಿಷಯ ಹಾಗೂ ಸನ್ನಿವೇಶಗಳಿಂದ ಸದಾ ದೂರವಾಗಿರಿ. ಅಂತಹ ಸನ್ನಿವೇಶಗಳು ನಿಮ್ಮಲ್ಲಿ ಒತ್ತಡವನ್ನು ಉಂಟು ಮಾಡುತ್ತವೆ... ಪರಿಣಾಮವಾಗಿ ನಿಮ್ಮ ನಿರ್ಣಾಯಾತ್ಮಕ ಭಾವ ಕುಸಿಯುತ್ತದೆ. ನಿಮ್ಮ ಭಾವನೆಗಳನ್ನು ನೀವು ನಿಯಂತ್ರಣದಲ್ಲಿ ಇಟ್ಟುಕೊಳ್ಳುವ ಮತ್ತು ಅದನ್ನು ದೀರ್ಘಕಾಲ ರೂಢಿಸಿಕೊಳ್ಳುವ ಮೂಲಕ ಮಾನಸಿಕವಾಗಿ ಬಲಿಷ್ಠರಾಗಬೇಕು.

* ಆಗಾಗ ತುಸು ವಿರಾಮವನ್ನು ಹೊಂದಬೇಕು... ನಮ್ಮ ಮೆದುಳು ಒತ್ತಡದಲ್ಲಿರುವಾಗ ಕಲಿಯುವುದಕ್ಕಿಂತ ಹೆಚ್ಚು ವಿಷಯಗಳನ್ನು ವಿರಾಮದಲ್ಲಿ ಅರ್ಥ ಮಾಡಿಕೊಳ್ಳುತ್ತದೆ ಹಾಗೂ ಕಲಿಯುತ್ತದೆ.. ಈ ರೀತಿ ವಿರಾಮದ ನಂತರ ಮತ್ತೆ ಕಾರ್ಯ ಚಟುವಟಿಕೆಯಲ್ಲಿ ತೊಡಗಿಕೊಂಡಾಗ ಶೇಕಡ 31 ರಷ್ಟು ಮೆದುಳಿನ ಪ್ರಗತಿ ಹೆಚ್ಚುತ್ತದೆ. ಪ್ರತಿದಿನ ಕನಿಷ್ಠ  3 ರಿಂದ ಗರಿಷ್ಠ 10 ನಿಮಿಷಗಳ ಕಾಲ ವಿರಾಮವನ್ನು ನೀಡಬೇಕು.... ಎಷ್ಟೋ ಬಾರಿ ಮಧ್ಯಾಹ್ನ ನಾವು ತೆಗೆದುಕೊಳ್ಳುವ ಹತ್ತು ನಿಮಿಷಗಳ ಪವರ್ ನ್ಯಾಪ್ ನಮ್ಮಲ್ಲಿ ಮುಂದಿನ ನಾಲ್ಕೈದು ಗಂಟೆಗಳ ಕಾಲ ನಿರಂತರವಾಗಿ ಕಾರ್ಯನಿರ್ವಹಿಸುವಲ್ಲಿ ಸಹಾಯಕವಾಗುತ್ತದೆ ಅಲ್ಲವೇ ?

*ನಮ್ಮ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ನಮ್ಮದೇ ಆಗಿರಬೇಕು ಹೊಸ ಹೊಸ ವಿಷಯಗಳನ್ನು ಕಲಿಯುತ್ತಾ ನಮ್ಮ ನರ ಕೋಶಗಳಲ್ಲಿ ಹೊಸ ನ್ಯೂರಾನ್ಗಳನ್ನು ಸೃಷ್ಟಿಸಲು ಅನುವು ಮಾಡಿಕೊಡಬೇಕು. ಅಸಲಿಗೆ ಬಡ್ಡಿಯು ಹೆಚ್ಚಾಗುವಂತೆ  ಜ್ಞಾನವು ನಮ್ಮಲ್ಲಿ ಹೆಚ್ಚುತ್ತಾ ಹೋಗುತ್ತದೆ. ಪ್ರತಿದಿನ ಕನಿಷ್ಠ 20 ಪುಟಗಳಷ್ಟು ಓದಲೇಬೇಕು.

*ನಿಮಗೆ ನಿಮ್ಮದೇ ಆದ ಒಂದು ಪುಟ್ಟ ಸ್ಪೇಸ್ ಇರಲೇಬೇಕು. ಅದು ನಿಮಗೆ ವಿರಾಮವನ್ನು ನೀಡುವ ಮೂಲಕ ನಿಮ್ಮ ಕಾರ್ಯ ಕ್ಷಮತೆಯನ್ನು ಹೆಚ್ಚಿಸುತ್ತದೆ. ನಿಮ್ಮ ಯೋಚನೆಗಳು ಕಾರ್ಯಗತ ಮಾಡುವ ಮುನ್ನವೇ ಆ ಕುರಿತು ಮಾತನಾಡಬೇಡಿ.

*ಇತರರು ನಿಮ್ಮನ್ನು ಹೊಗಳುವಾಗ ನಗು ಮುಖದಿಂದ ಆ ಹೊಗಳಿಕೆಯನ್ನು ಸ್ವೀಕರಿಸಿ. ಧನಾತ್ಮಕ ಹೊಗಳಿಕೆಗಳು ನಿಮ್ಮಲ್ಲಿ ಮಾನಸಿಕ ದೃಢತೆಯನ್ನು ತರುತ್ತವೆ... ಕೃತಜ್ಞತಾ ಭಾವವು ನಿಮ್ಮಲ್ಲಿ ಧನ್ಯತೆಯ ಭಾವವನ್ನು ಮೂಡಿಸುತ್ತದೆ. ಅತ್ಯಂತ ಸರಳವಾಗಿ ಧನ್ಯವಾದವನ್ನು ಸೂಚಿಸಿ. ಈ ರೀತಿ ವೈಜ್ಞಾನಿಕವಾಗಿ ಚಿಕ್ಕ ಪುಟ್ಟ ವರ್ತನೆಗಳಲ್ಲಿನ ಬದಲಾವಣೆಗಳನ್ನು ಮಾಡಿಕೊಳ್ಳುವ ಮೂಲಕ ನಾವು ನಮ್ಮ ಮೆದುಳಿನ ನರಕೋಶಗಳನ್ನು ಸದಾ ಚಟುವಟಿಕೆಯಿಂದ ಇರುವಂತೆ ಮಾಡಬೇಕು... ಪ್ರತಿ ಪುಟ್ಟ ಗೆಲುವು ಕೂಡ ನಮ್ಮನ್ನು ಮಾನಸಿಕವಾಗಿ ದೃಢವಾಗಿಸುತ್ತದೆ.... ನಮ್ಮ ಮೇಲೆ ನಮಗೆ ನಂಬಿಕೆ ಮತ್ತು ಆತ್ಮ ವಿಶ್ವಾಸ ಹೆಚ್ಚುತ್ತದೆ.

*ಯಾವುದಾದರೂ ಒಂದು ಒಳ್ಳೆಯ ಹವ್ಯಾಸವನ್ನು ನಿಮ್ಮದಾಗಿಸಿಕೊಳ್ಳಿ ಒಂದು ಮಂಡಲದ ಕಾಲ ಅಂದರೆ ಸರಿಸುಮಾರು 40 ದಿನಗಳ ಕಾಲ ಅದನ್ನು ಸತತವಾಗಿ ಮಾಡುತ್ತಾ ಬನ್ನಿ. ಆಗ ಅದು ನಿಮ್ಮ ದೈನಂದಿನ ಬದುಕಿನ ಒಂದು ಕೆಲಸವಾಗುತ್ತರೆ.

ತಡ ಏಕೆ ಸ್ನೇಹಿತರೆ ? ವಯಸ್ಸಾಗುವುದು ದೇಹಕ್ಕೆ ಹೊರತು ಮನಸ್ಸಿಗಲ್ಲ ಈಗಲೂ ಕೂಡ ನಮ್ಮ ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸಿ ನಮ್ಮ ಬದುಕಿನಲ್ಲಿ ನಾವೇ ಅಗ್ರಗಣ್ಯರಾಗುವ... ಏನಂತೀರಾ ?



ವೀಣಾ ಹೇಮಂತ್
ಗೌಡ ಪಾಟೀಲ್

ಈ ನಮ್ಮ ಧೃತಿ ನ್ಯೂಸ್
E NAMMA DHURTHI NEWS
KANNADA DAILY NEWS PAPER

## ಸಿಜೆಪಿಯನ್ನು ಎಂದಿಗೂ ಬೆಂಬಲಿಸುವುದಿಲ್ಲ, ಆದರೆ ಪ್ರತಿಭಟನೆಯ ಹಕ್ಕನ್ನು ನಿರಾಕರಿಸಲಾಗದು : ಅಣ್ಣಾಮಲೈ ಸ್ಪಷ್ಟನೆ



ನವದೆಹಲಿ: ಕಾಕ್ರೋಚ್ ಜನತಾ ಪಕ್ಷ (ಸಿಜೆಪಿ) ನಡೆಸುತ್ತಿರುವ ಪ್ರತಿಭಟನೆಗಳು ಮತ್ತು ಅದರ ನಾಯಕರ ಬಂಧನದ ವಿಚಾರವಾಗಿ ಕೇಂದ್ರ ಸರ್ಕಾರ ಹಾಗೂ ದೆಹಲಿ ಪೊಲೀಸರ ಕ್ರಮವನ್ನು ಪ್ರಶ್ನಿಸಿದ್ದ ಕೆ. ಅಣ್ಣಾಮಲೈ, ಇದೀಗ ತಮ್ಮ ನಿಲುವನ್ನು ಸ್ಪಷ್ಟಪಡಿಸಿದ್ದಾರೆ. ಸಿಜೆಪಿಯ ರಾಜಕೀಯ ಕಾರ್ಯಸೂಚಿ ಮತ್ತು ತಮ್ಮ ರಾಜಕೀಯ ನಿಲುವು ಸಂಪೂರ್ಣ ಭಿನ್ನವಾಗಿದ್ದು, ಆ ಪಕ್ಷವನ್ನು ಎಂದಿಗೂ ಬೆಂಬಲಿಸುವುದಿಲ್ಲ ಎಂದು ಅವರು ಹೇಳಿದ್ದಾರೆ.

ನಿನ್ನೆ ನಡೆದ ನಾಯಕರು ಆಂದೋಲನದ ಕಾರ್ಯಕ್ರಮದಲ್ಲಿ ಮಾತನಾಡಿದ ಅಣ್ಣಾಮಲೈ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಯೊಂದು ರಾಜಕೀಯ ಪಕ್ಷಕ್ಕೂ ಹೋರಾಟ ನಡೆಸುವ ಹಕ್ಕಿದೆ. ಆದರೆ ಪ್ರತಿಭಟನೆಗಳ ಸಂದರ್ಭದಲ್ಲಿ ಕಾನೂನು ಉಲ್ಲಂಘನೆಯಾಗಿದ್ದರೆ, ಅಧಿಕಾರಿಗಳು ಪ್ರತೀಕಾರದ ಮನೋಭಾವದಿಂದ ವರ್ತಿಸದೆ, ಕಾನೂನು ಮತ್ತು ಸೂಕ್ತ ಪ್ರಕ್ರಿಯೆಯಂತೆ ಕ್ರಮ ಕೈಗೊಳ್ಳಬೇಕು ಎಂದು ಅಭಿಪ್ರಾಯಪಟ್ಟರು.

**ಬಂಧನದ ಕ್ರಮಕ್ಕೆ ಆಕ್ಷೇಪ:**

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ರಾಜೀನಾಮೆಗೆ ಒತ್ತಾಯಿಸಿ ಅ.10ರಂದು ಸಿಜೆಪಿ ನಡೆಸಿದ್ದ ಪ್ರತಿಭಟನೆ ಹಾಗೂ ನಂತರದ ಬೆಳವಣಿಗೆಗಳ ಸಂದರ್ಭದಲ್ಲಿ ಪೊಲೀಸರು ಕೈಗೊಂಡ ಕ್ರಮವನ್ನು ಅಣ್ಣಾಮಲೈ ಟೀಕಿಸಿದ್ದರು. ಸಿಜೆಪಿ ನಾಯಕರಾದ ಅಭಿಜೀತ್ ದೀಪ್ಕೆ, ಸೌರವ್ ದಾಸ್ ಮತ್ತು ಅಶುತೋಷ್ ರಂಕಾ ಅವರ ವಿರುದ್ಧದ ಕ್ರಮಗಳ ಬಗ್ಗೆಯೂ ಅವರು ಪ್ರಶ್ನೆಗಳನ್ನು ಎತ್ತಿದ್ದರು. ಪ್ರತಿಭಟನಾಕಾರರು ತಪ್ಪು ಮಾಡಿದ್ದರೆ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಲಿ. ದೇಶದ ಸಾರ್ವಭೌಮತೆಗೆ ಅಪಾಯವಿದ್ದರೆ ತನಿಖಾ ಸಂಸ್ಥೆಗಳನ್ನು ಬಳಸಿಕೊಂಡು ಕಾನೂನುಬದ್ಧವಾಗಿ ಕ್ರಮ ಜರುಗಿಸಬಹುದು. ಆದರೆ ಸಾಮಾಜಿಕ ಮಾಧ್ಯಮಗಳಲ್ಲಿ ಆರೋಪಗಳನ್ನು ಹರಡುವುದು ಅಥವಾ ಪ್ರತೀಕಾರದ ಕ್ರಮಗಳನ್ನು ಅನುಸರಿಸುವುದು ಸೂಕ್ತವಲ್ಲ ಎಂಬುದು ತಮ್ಮ ನಿಲುವು ಎಂದು ಅವರು ಹೇಳಿದ್ದಾರೆ. ದೇಶದ ಏಕತೆ, ಸಾರ್ವಭೌಮತ್ವ ಮತ್ತು ದೇಶಭಕ್ತಿಯ ಬಗ್ಗೆ ತಮಗೆ ಯಾರೂ ಪಾಠ ಹೇಳಬೇಕಿಲ್ಲ ಎಂದ ಅವರು, ದೇಶದ ವಿವಿಧ ರಾಜ್ಯಗಳಲ್ಲಿ ಕೆಲಸ ಮಾಡಿದ ಅನುಭವವಿದೆ ಎಂದು ಪ್ರತಿಪಾದಿಸಿದರು.

**ಪ್ರಜಾಪ್ರಭುತ್ವ ಸಂಸ್ಥೆಗಳ ಮೇಲಿನ ನಂಬಿಕೆ ಮುಖ್ಯ:**

ಚುನಾವಣಾ ಆಯೋಗ ಮತ್ತು ಸುಪ್ರೀಂ ಕೋರ್ಟ್ ಸೇರಿದಂತೆ ಪ್ರಜಾಪ್ರಭುತ್ವದ ಪ್ರಮುಖ ಸಂಸ್ಥೆಗಳ ಮೇಲಿನ ಸಾರ್ವಜನಿಕ ನಂಬಿಕೆಯನ್ನು ದುರ್ಬಲಗೊಳಿಸುವ ಪ್ರಯತ್ನಗಳನ್ನು ಸಹಿಸಲು ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ಹೀಗಾಗಿ, ಪ್ರತಿಭಟನೆಯ ಹಕ್ಕನ್ನು ಸಮರ್ಥಿಸುವುದರ ಜೊತೆಗೆ ಪ್ರಜಾಪ್ರಭುತ್ವ ಸಂಸ್ಥೆಗಳ ಗೌರವ ಮತ್ತು ಕಾನೂನಿನ ಪಾಲನೆಯೂ ಅಗತ್ಯ ಎಂಬ ನಿಲುವನ್ನು ಅವರು ಮುಂದಿಟ್ಟಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ಕಾರ್ಯವೈಖರಿಯನ್ನು ಶ್ಲಾಘಿಸಿದ ಅವರು, ಮೋದಿ ಉತ್ತಮ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿದರು. ಆದರೆ ಪ್ರಧಾನಿಯನ್ನು ಬೆಂಬಲಿಸುವುದರಿಂದ ಸರ್ಕಾರದ ಪ್ರತಿಯೊಂದು ನಿರ್ಧಾರವನ್ನೂ ಪ್ರಶ್ನಿಸದೆ ಒಪ್ಪಿಕೊಳ್ಳಬೇಕು ಎಂದರ್ಥವಲ್ಲ. ತಪ್ಪು ಎಂದು ಭಾವಿಸಿದ ವಿಚಾರಗಳನ್ನು ಪ್ರಶ್ನಿಸುವ ಹಕ್ಕು ತಮಗಿದೆ ಎಂದು ಸ್ಪಷ್ಟಪಡಿಸಿದರು.

**ಬಿಜೆಪಿ-ಅಣ್ಣಾಮಲೈ ನಡುವೆ ಹೆಚ್ಚಿದ ವಾಕ್ಸಮರ:**

ಈ ಬೆಳವಣಿಗೆ ಅಣ್ಣಾಮಲೈ ಮತ್ತು ಬಿಜೆಪಿ ನಡುವಿನ ರಾಜಕೀಯ ವಾಕ್ಸಮರ ತೀವ್ರಗೊಂಡಿರುವ ಸಂದರ್ಭದಲ್ಲೇ ನಡೆದಿದೆ. 2026ರ ಜೂನ್‌ನಲ್ಲಿ ಬಿಜೆಪಿಯಿಂದ ಹೊರಬಂದು ಸ್ವತಂತ್ರ ರಾಜಕೀಯ ಉಪಕ್ರಮ ಆರಂಭಿಸಿರುವ ಅಣ್ಣಾಮಲೈ, ಸಿಜೆಪಿಯ ಕಾರ್ಯತಂತ್ರವನ್ನು ಒಪ್ಪುವುದಿಲ್ಲವಾದರೂ ಸರ್ಕಾರವನ್ನು ವಿರೋಧಿಸುವ ಅದರ ಹಕ್ಕನ್ನು ನಿರಾಕರಿಸಲಾಗದು ಎಂದು ಈ ಹಿಂದೆ ಹೇಳಿದ್ದರು. ಬಿಜೆಪಿ ಸಿಜೆಪಿಯನ್ನು ವಿರೋಧಿಸುವ ನೆಪದಲ್ಲಿ ಅದಕ್ಕೆ ಅನಗತ್ಯ ಪ್ರಚಾರ ನೀಡುತ್ತಿದೆಯೇ ಎಂಬ ಪ್ರಶ್ನೆಯನ್ನೂ ಅವರು ಎತ್ತಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ್ದ ತಮಿಳುನಾಡು ಬಿಜೆಪಿ ವಕ್ತಾರ ನಾರಾಯಣನ್ ತಿರುಪತಿ, ಶಾಂತಿಯುತ ಪ್ರತಿಭಟನೆ ಮತ್ತು ಉದ್ದೇಶಪೂರ್ವಕ ಕಾನೂನು ಉಲ್ಲಂಘನೆಯ ನಡುವಿನ ವ್ಯತ್ಯಾಸವನ್ನು ಗುರುತಿಸಬೇಕು ಎಂದು ತಿರುಗೇಟು ನೀಡಿದ್ದರು. ಒಟ್ಟಿನಲ್ಲಿ, ಸಿಜೆಪಿಯ ಪ್ರತಿಭಟನೆಗಳ ಮೇಲಿನ ಪೊಲೀಸ್ ಕ್ರಮವನ್ನು ಪ್ರಶ್ನಿಸಿರುವ ಅವರು, ಅದರಿಂದಾಗಿ ಆ ಸಂಘಟನೆಯ ರಾಜಕೀಯ ಉದ್ದೇಶಗಳಿಗೆ ಬೆಂಬಲ ನೀಡಿದಂತಾಗುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಸರ್ಕಾರದ ಪರ ನಿಲುವು ಮತ್ತು ಸರ್ಕಾರದ ಕ್ರಮಗಳ ವಿಮರ್ಶೆ ಎರಡೂ ಪ್ರಜಾಪ್ರಭುತ್ವದಲ್ಲಿ ಒಟ್ಟಿಗೆ ಅಸ್ತಿತ್ವದಲ್ಲಿರಬಹುದು ಎಂಬ ಸಂದೇಶವನ್ನು ಅವರ ಹೇಳಿಕೆಗಳು ನೀಡಿವೆ.

## ದಸರಾದ ಹತ್ತು ದಿನಗಳಲ್ಲಿ ಮೈಸೂರು ಮೃಗಾಲಯಕ್ಕೆ 1.93 ಕೋಟಿ ಆದಾಯ




ಮೈಸೂರು: ವಿಶ್ವವಿಖ್ಯಾತ ಮೈಸೂರು ಶ್ರೀ ಚಾಮರಾಜೇಂದ್ರ ಮೃಗಾಲಯಕ್ಕೆ 2026ರ ವಿಜಯದಶಮಿ ದಿನದಂದು 19,745 ಮಂದಿ ಭೇಟಿ ನೀಡಿದ್ದು, ?25.15 ಲಕ್ಷ ಆದಾಯ ಸಂಗ್ರಹವಾಗಿದೆ ಎಂದು ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕಿ ಪಿ. ಅನುಷ ತಿಳಿಸಿದ್ದಾರೆ.

ಈ ವರ್ಷದ ದಸರಾ ಹಬ್ಬದ ಹತ್ತು ದಿನಗಳ ಅವಧಿಯಲ್ಲಿ ಮೃಗಾಲಯಕ್ಕೆ ಒಟ್ಟು 1.57 ಲಕ್ಷ ವೀಕ್ಷಕರು ಭೇಟಿ ನೀಡಿದ್ದು, ?193.19 ಲಕ್ಷ ಆದಾಯ ದಾಖಲಾಗಿದೆ. ಆಯುಧ ಪೂಜೆಯಂದು 20,264 ಮಂದಿ ಭೇಟಿ ನೀಡಿದ್ದು, ?25.67 ಲಕ್ಷ ಆದಾಯ ಸಂಗ್ರಹವಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ವಿಜಯದಶಮಿ ದಿನದಂದು ವೀಕ್ಷಕರ ಸಂಖ್ಯೆ ಕಡಿಮೆಯಾಗಿದೆ. 2025ರಲ್ಲಿ ವಿಜಯದಶಮಿಯಂದು 27,272 ಮಂದಿ ಭೇಟಿ ನೀಡಿದ್ದು, ?34.07 ಲಕ್ಷ ಆದಾಯ ಬಂದಿತ್ತು. 2024ರಲ್ಲಿ 34,659 ಮಂದಿ ಭೇಟಿ ನೀಡಿದ್ದು, ?35.54 ಲಕ್ಷ ಆದಾಯ ದಾಖಲಾಗಿತ್ತು. 2023ರ ದಸರಾ ಅವಧಿಯಲ್ಲಿ 1.65 ಲಕ್ಷ ವೀಕ್ಷಕರಿಂದ ?167.10 ಲಕ್ಷ ಹಾಗೂ 2022ರಲ್ಲಿ 1.55 ಲಕ್ಷ ವೀಕ್ಷಕರಿಂದ ?153.51 ಲಕ್ಷ ಆದಾಯ ಸಂಗ್ರಹವಾಗಿತ್ತು. ಈ ವರ್ಷದ ದಸರಾ ಅವಧಿಯಲ್ಲಿ ಆದಾಯ ?193.19 ಲಕ್ಷಕ್ಕೆ ಏರಿಕೆಯಾಗಿದೆ. ದಸರಾ ಸಂದರ್ಭದಲ್ಲಿ ಮೃಗಾಲಯದಲ್ಲಿ ಸ್ವಚ್ಛತೆ ಮತ್ತು ಶಾಂತಿ ಕಾಪಾಡಲು ಸಹಕರಿಸಿದ ವೀಕ್ಷಕರು, ಪೊಲೀಸ್ ಸಿಬ್ಬಂದಿ ಹಾಗೂ ಮೃಗಾಲಯದ ಸಿಬ್ಬಂದಿಗೆ ಕಾರ್ಯನಿರ್ವಾಹಕ ನಿರ್ದೇಶಕಿ ಪಿ. ಅನುಷ ಧನ್ಯವಾದ ತಿಳಿಸಿದ್ದಾರೆ.

ಈ ನಮ್ಮ ಧೃತಿ ನ್ಯೂಸ್
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.
ಮೊ: 7353595904

# ಟಿಬೆಟ್‌ನಲ್ಲಿ 7.0 ತೀವ್ರತೆಯ ಭೂಕಂಪ : ಕನಿಷ್ಠ 16 ಮಂದಿ ಸಾವು, ಕುಸಿದ ನೂರಾರು ಮನೆಗಳು



ಲಾಸಾ: ಚೀನಾದ ಟಿಬೆಟ್ ಸ್ವಾಯತ್ತ ಪ್ರದೇಶದಲ್ಲಿ ಗುರುವಾರ ರಾತ್ರಿ ಸಂಭವಿಸಿದ 7.0 ತೀವ್ರತೆಯ ಪ್ರಬಲ ಭೂಕಂಪಕ್ಕೆ ಕನಿಷ್ಠ 16 ಮಂದಿ ಮೃತಪಟ್ಟಿದ್ದು, 46 ಜನರು ಗಾಯಗೊಂಡಿದ್ದಾರೆ. ಗಾಯಾಳುಗಳ ಪೈಕಿ 11 ಮಂದಿಯ ಸ್ಥಿತಿ ಗಂಭೀರವಾಗಿದೆ ಎಂದು ಸ್ಥಳೀಯ ಅಧಿಕಾರಿಗಳನ್ನು ಉಲ್ಲೇಖಿಸಿ ಚೀನಾದ ಸರ್ಕಾರಿ ಮಾಧ್ಯಮಗಳು ವರದಿ ಮಾಡಿವೆ. ಭೂಕಂಪದಿಂದ 339 ಮನೆಗಳು ಕುಸಿದಿದ್ದು, ಹಲವು ಕಟ್ಟಡಗಳಿಗೆ ಹಾನಿಯಾಗಿದೆ. ಪೀಡಿತ ಪ್ರದೇಶಗಳಲ್ಲಿ ರಕ್ಷಣಾ ಮತ್ತು ಪರಿಹಾರ ಕಾರ್ಯಾಚರಣೆ ಮುಂದುವರಿದಿದೆ.

ಭೂಮಿ ಕಂಪಿಸಿದ ಪರಿಣಾಮ ಜನರು ರೆಸ್ಟೋರೆಂಟ್‌ಗಳು, ಅಂಗಡಿಗಳು ಮತ್ತು ಸೂಪರ್ ಮಾರ್ಕೆಟ್‌ಗಳಿಂದ ಭಯಭೀತರಾಗಿ ಹೊರಗೆ ಓಡಿಬಂದರು. ಕಟ್ಟಡಗಳು ನಡುಗಿದ್ದರಿಂದ ಸೂಪರ್ ಮಾರ್ಕೆಟ್‌ಗಳ ಕಪಾಟಿನಲ್ಲಿದ್ದ ವಸ್ತುಗಳು ಕೆಳಗೆ ಬಿದ್ದಿವೆ. ಭೂಕಂಪದಿಂದ ಉಂಟಾಗಿರುವ ಒಟ್ಟಾರೆ ಹಾನಿಯ ಪ್ರಮಾಣವನ್ನು ಅಧಿಕಾರಿಗಳು ಇನ್ನೂ ಅಂದಾಜಿಸುತ್ತಿದ್ದಾರೆ.

**ನಾಗ್?ಕ ಪ್ರದೇಶದ ಸಮೀಪ ಭೂಕಂಪದ ಕೇಂದ್ರಬಿಂದು :**

ಅಮೆರಿಕದ ಭೂವೈಜ್ಞಾನಿಕ ಸಮೀಕ್ಷೆ ಪ್ರಕಾರ, ಭೂಕಂಪದ ಕೇಂದ್ರಬಿಂದು ನಾಗ್?ಕ ಪ್ರದೇಶದ ಪೂರ್ವ-ಈಶಾನ್ಯಕ್ಕೆ ಸುಮಾರು 190 ಕಿಲೋಮೀಟರ್ ಹಾಗೂ ಟಿಬೆಟ್‌ನ ಪ್ರಾದೇಶಿಕ ರಾಜಧಾನಿ ಲಾಸಾದಿಂದ ಈಶಾನ್ಯಕ್ಕೆ ಸುಮಾರು 390 ಕಿಲೋಮೀಟರ್ ದೂರದ ಪರ್ವತ ಪ್ರದೇಶದಲ್ಲಿತ್ತು. ಗುರುವಾರ ರಾತ್ರಿ 10.33ರ ಸುಮಾರಿಗೆ ಭೂಮಿಯ ಸುಮಾರು 10 ಕಿಲೋಮೀಟರ್ ಆಳದಲ್ಲಿ ಕಂಪನ ಸಂಭವಿಸಿದೆ ಎಂದು ವರದಿಯಾಗಿದೆ. ಬಕೆನ್ ಕೌಂಟಿಯ ಮಾರು ಪಟ್ಟಣದ ಸಮೀಪ ಭೂಕಂಪದ ಕೇಂದ್ರಬಿಂದು ಇತ್ತು ಎಂದು ಸ್ಥಳೀಯ ಅಧಿಕಾರಿಗಳು ತಿಳಿಸಿದ್ದಾರೆ. ಭೂಕಂಪದ ತೀವ್ರತೆಯಿಂದ ಪಟ್ಟಣದ ಕಚೇರಿಯ ಗೋಡೆಗಳಲ್ಲಿ ಬಿರುಕುಗಳು ಕಾಣಿಸಿಕೊಂಡಿವೆ. ಕೌಂಟಿ ಕೇಂದ್ರದಲ್ಲಿ ವಿದ್ಯುತ್ ಮತ್ತು ದೂರಸಂಪರ್ಕ ಸೇವೆಗಳಿಗೂ ಅಡಚಣೆ ಉಂಟಾಗಿದೆ.

**ನೂರಾರು ರಕ್ಷಣಾ ಸಿಬ್ಬಂದಿ ನಿಯೋಜನೆ :**

ಭೂಕಂಪ ಪೀಡಿತ ಪ್ರದೇಶದಲ್ಲಿ ಚೀನಾ ಅಧಿಕಾರಿಗಳು ಮೂರನೇ ಹಂತದ (ಲೆವೆಲ್-ಐಐಐ) ಭೂಕಂಪ ವಿಪತ್ತು ತುರ್ತು ಪ್ರತಿಕ್ರಿಯೆಯನ್ನು ಸಕ್ರಿಯಗೊಳಿಸಿದ್ದಾರೆ. ಪರಿಹಾರ ಕಾರ್ಯಗಳಿಗೆ ನೆರವಾಗಲು 300ಕ್ಕೂ ಹೆಚ್ಚು ಪೊಲೀಸ್ ಅಧಿಕಾರಿಗಳನ್ನು ಹಾಗೂ ಪ್ರಾದೇಶಿಕ ಅಗ್ನಿಶಾಮಕ ಮತ್ತು ರಕ್ಷಣಾ ಪಡೆಗಳ 347 ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದು ಸರ್ಕಾರಿ ಮಾಧ್ಯಮಗಳು ವರದಿ ಮಾಡಿವೆ. ರಕ್ಷಣಾ ಕಾರ್ಯಕರ್ತರು ಹಾನಿಗೊಳಗಾದ ಕಟ್ಟಡಗಳಲ್ಲಿ ಸಿಲುಕಿರುವವರಿಗಾಗಿ ಶೋಧ ನಡೆಸುತ್ತಿದ್ದಾರೆ. ಗಾಯಾಳುಗಳನ್ನು ಸುರಕ್ಷಿತ ಸ್ಥಳಗಳಿಗೆ ಸಾಗಿಸಲಾಗುತ್ತಿದ್ದು, ಮನೆಗಳನ್ನು ಕಳೆದುಕೊಂಡ ಜನರಿಗೆ ತಾತ್ಕಾಲಿಕ ಆಶ್ರಯ ಕಲ್ಪಿಸಲು ಡೇರೆಗಳನ್ನು ಸ್ಥಾಪಿಸಲಾಗುತ್ತಿದೆ. ಹಾನಿಗೊಳಗಾದ ಕಟ್ಟಡಗಳ ಸ್ಥಿತಿಯನ್ನು ಪರಿಶೀಲಿಸುವುದರ ಜೊತೆಗೆ ಅಗತ್ಯ ಪರಿಹಾರ ಸಾಮಗ್ರಿಗಳನ್ನು ಪೀಡಿತ ಪ್ರದೇಶಗಳಿಗೆ ತಲುಪಿಸುವ ಕಾರ್ಯವೂ ನಡೆಯುತ್ತಿದೆ. ಕಳೆದ ಐದು ವರ್ಷಗಳಲ್ಲಿ ಟಿಬೆಟ್ ಪ್ರದೇಶವನ್ನು ಅಪ್ಪಳಿಸಿದ ಅತ್ಯಂತ ಪ್ರಬಲ ಭೂಕಂಪ ಇದಾಗಿದೆ ಎಂದು ವರದಿಗಳು ತಿಳಿಸಿವೆ. ಪರ್ವತ ಪ್ರದೇಶವಾಗಿರುವ ಟಿಬೆಟ್ ಹಾಗೂ ಅದರ ಸುತ್ತಮುತ್ತಲಿನ ಪ್ರದೇಶಗಳು ಭೂಕಂಪದ ಅಪಾಯಕ್ಕೆ ಒಳಪಟ್ಟಿವೆ. ಈ ಭಾಗದಲ್ಲಿ ಸಂಭವಿಸುವ ಪ್ರಬಲ ಕಂಪನಗಳು ಕಟ್ಟಡಗಳ ಕುಸಿತ, ರಸ್ತೆ ಸಂಪರ್ಕ ಕಡಿತ ಮತ್ತು ದೂರದ ಪ್ರದೇಶಗಳಿಗೆ ಪರಿಹಾರ ತಲುಪಿಸುವಲ್ಲಿನ ಸವಾಲುಗಳನ್ನು ಹೆಚ್ಚಿಸುತ್ತವೆ.

**ಚೀನಾದಲ್ಲಿ ಹಿಂದೆಯೂ ಸಂಭವಿಸಿದ್ದ ಭೀಕರ ಭೂಕಂಪಗಳು :**

ಚೀನಾ ಈ ಹಿಂದೆಯೂ ಹಲವು ವಿನಾಶಕಾರಿ ಭೂಕಂಪಗಳನ್ನು ಎದುರಿಸಿದೆ. 2025ರ ಜನವರಿಯಲ್ಲಿ ಟಿಬೆಟ್‌ನ ಟಿಂಗ್ರಿ ಕೌಂಟಿಯಲ್ಲಿ ಸಂಭವಿಸಿದ ಭೂಕಂಪದಲ್ಲಿ ಕನಿಷ್ಠ 126 ಮಂದಿ ಮೃತಪಟ್ಟಿದ್ದರು. 2023ರ ಡಿಸೆಂಬರ್‌ನಲ್ಲಿ ವಾಯುವ್ಯಚೀನಾದ ಗನ್ಸುಪ್ರಾಂತ್ಯದಲ್ಲಿ ಸಂಭವಿಸಿದ ಭೂಕಂಪದಲ್ಲಿ ಕನಿಷ್ಠ 127 ಜನರು ಸಾವನ್ನಪ್ಪಿದ್ದರು ಎಂದು ಸರ್ಕಾರಿ ಮಾಧ್ಯಮಗಳು ವರದಿ ಮಾಡಿದ್ದವು. 2008ರಲ್ಲಿ ಸಿಚುವಾನ್ ಪ್ರಾಂತ್ಯದಲ್ಲಿ ಸಂಭವಿಸಿದ ಭೀಕರ ಭೂಕಂಪದಲ್ಲಿ ಸುಮಾರು 90,000 ಮಂದಿ ಮೃತಪಟ್ಟಿದ್ದಾರೆ ಅಥವಾ ನಾಪತ್ತೆಯಾಗಿದ್ದಾರೆ ಎಂದು ಅಂದಾಜಿಸಲಾಗಿತ್ತು. 2014ರಲ್ಲಿ ಯುನ್ನಾನ್ ಪ್ರಾಂತ್ಯದಲ್ಲಿ ಸಂಭವಿಸಿದ ಭೂಕಂಪದಲ್ಲಿಯೂ 600ಕ್ಕೂ ಹೆಚ್ಚು ಮಂದಿ ಪ್ರಾಣ ಕಳೆದುಕೊಂಡಿದ್ದರು.

ಪ್ರಸ್ತುತ ಟಿಬೆಟ್‌ನಲ್ಲಿ ರಕ್ಷಣಾ ಕಾರ್ಯಾಚರಣೆ ಮುಂದುವರಿದಿದ್ದು, ಸಾವಿನ ಸಂಖ್ಯೆ ಮತ್ತು ಆಸ್ತಿಪಾಸ್ತಿಯ ನಷ್ಟದ ಕುರಿತು ಇನ್ನಷ್ಟು ಮಾಹಿತಿ ಲಭ್ಯವಾಗಬೇಕಿದೆ. ಹಾನಿಗೊಳಗಾದ ಕಟ್ಟಡಗಳಲ್ಲಿ ಸಿಲುಕಿರುವವರ ಶೋಧ, ಗಾಯಾಳುಗಳಿಗೆ ಚಿಕಿತ್ಸೆಹಾಗೂ ಸಂತ್ರಸ್ತರಿಗೆ ತಾತ್ಕಾಲಿಕ ವಸತಿ ಒದಗಿಸುವುದು ಅಧಿಕಾರಿಗಳ ಪ್ರಮುಖ ಆದ್ಯತೆಯಾಗಿದೆ.

# ಹಿರಿಯ ಉಪ ಚುನಾವಣಾ ಆಯುಕ್ತರ ವಿರುದ್ಧ ದೂರು : ತಕ್ಷಣದ ಕ್ರಮಕ್ಕೆ ಸಂಪುಟ ಸಚಿವಾಲಯ ನಕಾರ

ನವದೆಹಲಿ: ಹಿರಿಯ ಉಪ ಚುನಾವಣಾ ಆಯುಕ್ತ ಮನೀಶ್ ಗರ್ಗ್ ಅವರ ಕಾರ್ಯವೈಖರಿ ಕುರಿತು ಚುನಾವಣಾ ಆಯುಕ್ತರಾದ ಸುಖ್‌ಬೀರ್ ಸಿಂಗ್ ಸಂಧು ಮತ್ತು ವಿವೇಕ್ ಜೋಶಿ ಸಲ್ಲಿಸಿದ್ದ ದೂರುಗಳ ಆಧಾರದಲ್ಲಿ ತಕ್ಷಣ ಕ್ರಮ ಕೈಗೊಳ್ಳಲು ಕೇಂದ್ರ ಸಂಪುಟ ಸಚಿವಾಲಯ ನಿರಾಕರಿಸಿದೆ.

ಈ ಪತ್ರಗಳು ಚುನಾವಣಾ ಆಯುಕ್ತರು ತಮ್ಮ ವೈಯಕ್ತಿಕ ಸಾಮರ್ಥ್ಯದಲ್ಲಿ ಸಲ್ಲಿಸಿರುವ ಸಂವಹನಗಳಾಗಿದ್ದು, ಅವುಗಳನ್ನು ಇಡೀ ಚುನಾವಣಾ ಆಯೋಗದ ಅಧಿಕೃತ ಪ್ರಾತಿನಿಧ್ಯವೆಂದು ಪರಿಗಣಿಸಲು ಸಾಧ್ಯವಿಲ್ಲ ಎಂದು ಸಚಿವಾಲಯ ಸ್ಪಷ್ಟಪಡಿಸಿದೆ. ಮಾಹಿತಿ ಹಕ್ಕು ಕಾಯ್ದೆಯಡಿ (ಆರ್‌ಟಿಐ) ಬಹಿರಂಗಗೊಂಡ ದಾಖಲೆಗಳಿಂದ ಈ ಮಾಹಿತಿ ತಿಳಿದುಬಂದಿದೆ ಎಂದು ಪಿಟಿಐ ವರದಿ ಮಾಡಿದೆ. ಚುನಾವಣಾ ಆಯುಕ್ತರಾದ ಸಂಧು ಮತ್ತು ಜೋಶಿ ಅವರು ಜುಲೈ 29ರಂದು ಸಂಪುಟ ಕಾರ್ಯದರ್ಶಿ ಟಿ.ವಿ. ಸೋಮನಾಥನ್ ಅವರಿಗೆ ಪ್ರತ್ಯೇಕ ಪತ್ರಗಳನ್ನು ಬರೆದು ಮನೀಶ್ ಗರ್ಗ್ ಅವರ ಕಾರ್ಯನಿರ್ವಹಣೆಯ ಬಗ್ಗೆ ಕಳವಳ ವ್ಯಕ್ತಪಡಿಸಿದ್ದರು. ಗರ್ಗ್ ಅವರು ಹಿರಿಯ ಉಪ ಚುನಾವಣಾ ಆಯುಕ್ತರು, ಉಪ ಚುನಾವಣಾ ಆಯುಕ್ತರು, ಮಹಾನಿರ್ದೇಶಕರು ಹಾಗೂ ಸಮಾನ ಶ್ರೇಣಿಯ ಅಧಿಕಾರಿಗಳ ನಡುವಿನ ಕೆಲಸದ ಹಂಚಿಕೆಯನ್ನು ಆಯೋಗದೊಂದಿಗೆ ಪೂರ್ವಭಾವಿ ಚರ್ಚೆ ನಡೆಸದೆ ಬದಲಿಸಿದ್ದಾರೆ ಎಂಬುದು ಪ್ರಮುಖ ಆರೋಪವಾಗಿದೆ. ಆಯೋಗದ ಅನುಮತಿ ಅಥವಾ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸದೆ ಇಂತಹ ಬದಲಾವಣೆಗಳನ್ನು ಮಾಡಬಾರದು ಎಂದು ಮೌಖಿಕವಾಗಿ ಹಾಗೂ ಲಿಖಿತವಾಗಿ ಸೂಚನೆ ನೀಡಿದ್ದರೂ, ಕೆಲಸದ ಹಂಚಿಕೆಯಲ್ಲಿ ಬದಲಾವಣೆಗಳನ್ನು ಮಾಡಲಾಗಿದೆ ಎಂದು ಇಬ್ಬರು ಆಯುಕ್ತರು ತಮ್ಮ ಪತ್ರಗಳಲ್ಲಿ ಆಕ್ಷೇಪಿಸಿದ್ದಾರೆ. ಅಲ್ಲದೆ, ಆಡಳಿತ ವಿಭಾಗವು ಸಂಬಂಧಿತ ಕಡತವನ್ನು ಪಡೆಯಲು ಪ್ರಯತ್ನಿಸಿದಾಗ ಅದನ್ನು ಒದಗಿಸಿರಲಿಲ್ಲ ಎಂಬ ಆರೋಪವನ್ನೂ ಜೋಶಿ ಮಾಡಿದ್ದಾರೆ.

ಈ ಕ್ರಮಗಳು ಸ್ಥಾಪಿತ ಕಾರ್ಯವಿಧಾನಗಳಿಗೆ ವಿರುದ್ಧವಾಗಿದ್ದು, ಮುಖ್ಯ ಚುನಾವಣಾ ಆಯುಕ್ತರು ಮತ್ತು ಇತರ ಚುನಾವಣಾ ಆಯುಕ್ತರ ನೇಮಕಾತಿ, ಸೇವಾ ಷರತ್ತುಗಳು ಹಾಗೂ ಅಧಿಕಾರಾವಧಿಗೆ ಸಂಬಂಧಿಸಿದ 2023ರ ಕಾಯ್ದೆಯ ನಿಬಂಧನೆಗಳಿಗೆ ವಿರುದ್ಧವಾಗಿವೆ ಎಂದು ಆಯುಕ್ತರು ವಾದಿಸಿದ್ದಾರೆ.

**ಸಾಂವಿಧಾನಿಕ ಸಂಸ್ಥೆಯ ಕಾರ್ಯವೈಖರಿಯಲ್ಲಿ ಹಸ್ತಕ್ಷೇಪದ ಆತಂಕ:**

ಆರ್‌ಟಿಐ ಅರ್ಜಿಗೆ ನೀಡಿದ ಪ್ರತಿಕ್ರಿಯೆಯಲ್ಲಿ ಸಂಪುಟ ಸಚಿವಾಲಯ, ಚುನಾವಣಾ ಆಯೋಗವು ಸ್ವತಂತ್ರವಾಗಿ ಮತ್ತು ಪಾರದರ್ಶಕವಾಗಿ ಕಾರ್ಯನಿರ್ವಹಿಸಬೇಕಾದ ಸಾಂವಿಧಾನಿಕ ಸಂಸ್ಥೆಯಾಗಿದೆ ಎಂದು ಉಲ್ಲೇಖಿಸಿದೆ. ಆಯೋಗದ ಅಧಿಕೃತ ಸಂವಹನವಿಲ್ಲದೆ ಇಬ್ಬರು ಆಯುಕ್ತರ ಪ್ರತ್ಯೇಕ ಪತ್ರಗಳ ಆಧಾರದಲ್ಲಿ ಕ್ರಮ ಕೈಗೊಳ್ಳುವುದು ಸೂಕ್ತವಲ್ಲ. ಅಂತಹ ಕ್ರಮವನ್ನು ಚುನಾವಣಾ ಆಯೋಗದ ಕಾರ್ಯನಿರ್ವಹಣೆಯಲ್ಲಿ ಕಾರ್ಯಾಂಗದ ಹಸ್ತಕ್ಷೇಪವೆಂದು ಅರ್ಥೈಸುವ ಸಾಧ್ಯತೆಯಿದೆ ಎಂದು ಸಚಿವಾಲಯ ಅಭಿಪ್ರಾಯಪಟ್ಟಿದೆ. ಆದರೆ, ಪತ್ರಗಳನ್ನು ಗಂಭೀರವಾಗಿ ಪರಿಗಣಿಸಿರುವ ಸಚಿವಾಲಯ, ಅವುಗಳನ್ನು ಸ್ವೀಕರಿಸಿ ಸಿಬ್ಬಂದಿ ಮತ್ತು ತರಬೇತಿ ಇಲಾಖೆ, ಸ್ಥಾಪನಾ ಅಧಿಕಾರಿ ಹಾಗೂ ಮುಖ್ಯ ಚುನಾವಣಾ ಆಯುಕ್ತರ ಕಚೇರಿಗೆ ಪ್ರತಿಗಳನ್ನು ಕಳುಹಿಸಿದೆ. ಅಲ್ಲದೆ, ಭವಿಷ್ಯದಲ್ಲಿ ಸಂಬಂಧಿತ ಅಧಿಕಾರಿಯ ಕುರಿತು ನಿರ್ಧಾರ ಕೈಗೊಳ್ಳುವಾಗ ಪರಿಗಣಿಸಲು ಈ ವಿಷಯವನ್ನು ದಾಖಲೆಯಲ್ಲಿ ಇರಿಸಿದೆ.



**ಮತದಾರರ ಪಟ್ಟಿ ನಿರ್ವಹಣೆಯ ಅಧಿಕಾರ ಹಂಚಿಕೆ ವಿವಾದ:**

ಗರ್ಗ್ ಹೊರಡಿಸಿದ್ದ ಕೆಲಸದ ಮರುಹಂಚಿಕೆ ಆದೇಶಗಳು ಮತದಾರರ ಪಟ್ಟಿಗೆ ಸಂಬಂಧಿಸಿದ ಜವಾಬ್ದಾರಿಗಳ ಹಂಚಿಕೆಯ ಕುರಿತೂ ವಿವಾದಕ್ಕೆ ಕಾರಣವಾಗಿದ್ದವು. ಮತದಾರರ ಹೆಸರು ಸೇರ್ಪಡೆ, ಅಳಿಸುವಿಕೆ ಮತ್ತು ಪಟ್ಟಿಯ ಪರಿಷ್ಕರಣೆಗೆ ಸಂಬಂಧಿಸಿದ ಅಧಿಕಾರಗಳು ರಾಜ್ಯ ಮಟ್ಟದ ಅಧಿಕಾರಿಗಳ ಬದಲಿಗೆ ಕೇಂದ್ರ ಮಟ್ಟದಲ್ಲಿ ಹೆಚ್ಚು ಕೇಂದ್ರೀಕೃತವಾಗುವ ಸಾಧ್ಯತೆಯ ಬಗ್ಗೆ ಇಬ್ಬರು ಆಯುಕ್ತರು ಆತಂಕ ವ್ಯಕ್ತಪಡಿಸಿದ್ದರು ಎಂದು ಸೆಪ್ಟೆಂಬರ್‌ನಲ್ಲಿ ವರದಿಯಾಗಿತ್ತು. ಆದರೆ, ಸೆಪ್ಟೆಂಬರ್ 26ರಂದು ಚುನಾವಣಾ ಆಯೋಗ ಬಿಡುಗಡೆ ಮಾಡಿದ ಹೇಳಿಕೆಯ ಪ್ರಕಾರ, ಸಂಧು ಮತ್ತು ಜೋಶಿ ಅವರ ನಿರ್ದೇಶನದ ಮೇರೆಗೆ ಗರ್ಗ್ ಹೊರಡಿಸಿದ್ದ ಕೆಲಸದ ಮರುಹಂಚಿಕೆ ಆದೇಶಗಳನ್ನು ಜಾರಿಗೆ ತರಲಾಗಿಲ್ಲ. ಸಂಪುಟ ಕಾರ್ಯದರ್ಶಿಗೆ ಕಳುಹಿಸಿದ ಪತ್ರಗಳು ನಿಯೋಜನೆಯಲ್ಲಿರುವ ಅಧಿಕಾರಿಯ ಕಾರ್ಯವೈಖರಿಗೆ ಸಂಬಂಧಿಸಿದ್ದವೇ ಹೊರತು, ನೀತಿ ನಿರ್ಧಾರಗಳು ಅಥವಾ ಆಯೋಗದ ಮಾಹಿತಿ ತಂತ್ರಜ್ಞಾನ ವಿಭಾಗದ ಕಾರ್ಯನಿರ್ವಹಣೆಗೆ ಸಂಬಂಧಿಸಿರಲಿಲ್ಲ ಎಂದು ಆಯೋಗ ಸ್ಪಷ್ಟಪಡಿಸಿತ್ತು.

**ಆಯೋಗದ ಆಂತರಿಕ ಪ್ರಕ್ರಿಯೆ ಕುರಿತು ಪ್ರಶ್ನೆ:**

ಈ ಬೆಳವಣಿಗೆಯು ಚುನಾವಣಾ ಆಯೋಗದ ಆಂತ ರಿಕ ಭಿನ್ನಾಭಿಪ್ರಾಯಗಳನ್ನು ಬಗೆಹರಿಸುವ ಪ್ರಕ್ರಿಯೆಯ ಕುರಿತು ಚರ್ಚೆಗೆ ಕಾರಣವಾಗಿದೆ. ಮಾಜಿ ಚುನಾವಣಾ ಆಯುಕ್ತ ಅಶೋಕ್ ಲವಾಸಾ ಅವರು, ಈ ಬೆಳವಣಿಗೆಯ ಹಿಂದಿನ ಸಂಪೂರ್ಣ ಸಂಗತಿಗಳನ್ನು ಆಯೋಗ ಸ್ಪಷ್ಟಪಡಿಸಬೇಕೆಂದು ಅಭಿಪ್ರಾಯಪಟ್ಟಿದ್ದಾರೆ. ರಾಜಕೀಯ ವಿಶ್ಲೇಷಕ ಯೋಗೇಂದ್ರ ಯಾದವ್ ಕೂಡ ಇಬ್ಬರು ಆಯುಕ್ತರು ಪೂರ್ಣ ಆಯೋಗದ ಸಭೆಯನ್ನು ಏಕೆ ಕೋರಲಿಲ್ಲ ಎಂಬ ಪ್ರಶ್ನೆ ಎತ್ತಿದ್ದಾರೆ. ಒಟ್ಟಿನಲ್ಲಿ, ಹಿರಿಯ ಚುನಾವಣಾ ಅಧಿಕಾರಿಯ ಕಾರ್ಯವೈಖರಿ ಕುರಿತು ಇಬ್ಬರು ಆಯುಕ್ತರು ವ್ಯಕ್ತಪಡಿಸಿದ ಆಕ್ಷೇಪಣೆಗಳು, ಸಂಪುಟ ಸಚಿವಾಲಯದ ಪ್ರತಿಕ್ರಿಯೆ ಮತ್ತು ಆಯೋಗದ ಆಂತರಿಕ ಕಾರ್ಯವಿಧಾನಗಳು ಈಗ ಸಾರ್ವಜನಿಕ ಚರ್ಚೆಯ ವಿಷಯವಾಗಿವೆ. ಈ ಪ್ರಕರಣದಲ್ಲಿ ಸಚಿವಾಲಯ ತಕ್ಷಣದ ಕ್ರಮ ಕೈಗೊಳ್ಳದಿದ್ದರೂ, ಭವಿಷ್ಯದ ನಿರ್ಧಾರಗಳಿಗಾಗಿ ದೂರುಗಳನ್ನು ದಾಖಲೆಯಲ್ಲಿ ಇರಿಸಿರುವುದು ಗಮನಾರ್ಹವಾಗಿದೆ.

# ದೆಹಲಿಯಲ್ಲಿ ಹೈಕಮಾಂಡ್ ನಾಯಕರ ಜೊತೆ ಸಿಎಂ ಡಿಕೆಶಿ, ಪ್ರಿಯಾಂಕ್ ಖರ್ಗೆ ಪ್ರತ್ಯೇಕ ಮಾತುಕತೆ

ಬೆಂಗಳೂರು: ರಾಜ್ಯದಲ್ಲಿ ಸ್ಟಿಂಗ್ ಆಪರೇಷನ್ ವಿಚಾರ ಗಂಭೀರ ಚರ್ಚೆಯಾಗುತ್ತಿರುವ ನಡುವೆಯೇ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಗೃಹ ಸಚಿವ ಪ್ರಿಯಾಂಕ್ ಖರ್ಗೆಯವರು ಹೈಕಮಾಂಡ್ ನಾಯಕರನ್ನು ಪ್ರತ್ಯೇಕವಾಗಿ ಭೇಟಿ ಮಾಡಿರುವುದು ನಾನಾ ರೀತಿಯ ಚರ್ಚೆಗೆ ಕಾರಣವಾಗಿದೆ.ನಕ್ಷೆಗಳನ್ನು ನೋಡಿ ನಿನ್ನೆ ದೆಹಲಿಗೆ ತೆರಳಿದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಧ್ಯಾಹ್ನದ ವೇಳೆಗೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರನ್ನು ಭೇಟಿ ಮಾಡಿದರು. ಆದರೆ ತಮ ಭೇಟಿಯ ವೇಳೆ ಸ್ಟಿಂಗ್ ಆಪರೇಷನ್ ಕುರಿತು ಯಾವುದೇ ಚರ್ಚೆ ಮಾಡಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಅದೇ ವೇಳೆಗೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಕೂಡ ದೆಹಲಿಗೆ ಭೇಟಿ ನೀಡಿದ್ದು, ಕೆ.ಸಿ.ವೇಣುಗೋಪಾಲ್ ಅವರ ಭೇಟಿಗೆ ಆಗಮಿಸಿದರು. ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಮತ್ತು ಗೃಹ ಸಚಿವರು ಸಂದಿಸಿದ್ದು ಕೆ.ಸಿ.ವೇಣುಗೋಪಾಲ್ ಜೊತೆ ಪ್ರತ್ಯೇಕ ಮಾತುಕತೆ ನಡೆಸಿದ್ದಾರೆ.

ಸಚಿವ ಪ್ರಿಯಾಂಕ್ ಅವರು ದೆಹಲಿಗೆ ಬರುವ ಬಗ್ಗೆ ನನಗೆ ಮಾಹಿತಿ ಇರಲಿಲ್ಲ ಎಂದು ಮುಖ್ಯಮಂತ್ರಿಯವರು ಹೇಳಿದ್ದು ಅಚ್ಚರಿ ಮೂಡಿಸಿತ್ತು. ವೇಣುಗೋಪಾಲ್ ಭೇಟಿಯ ಬಳಿಕ ಪ್ರಿಯಾಂಕ್ ಖರ್ಗೆಯವರು ಸ್ಟಿಂಗ್ ಆಪರೇಷನ್ ಬಗ್ಗೆ ಹೈಕಮಾಂಡ್ ನಾಯಕರಿಗೆ ಮಾಹಿತಿ ನೀಡಿರುವುದಾಗಿ ತಿಳಿಸಿದ್ದಾರೆ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಸ್ಟಿಂಗ್ ಆಪರೇಷನ್ ನಡೆಸಲು ರೂಪಿಸಲಾಗಿದ್ದ ಸಂಚು ರಾಜ್ಯ ರಾಜಕಾರಣದಲ್ಲಿ ಭಾರೀ ಚರ್ಚೆಗೆ ಗ್ರಾಸವಾಗಿದೆ. ವಿರೋಧ ಪಕ್ಷಗಳು ಅದರಲ್ಲೂ ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿಯವರು ಇದನ್ನು ಆಧ್ಯತೆಯ ವಿಷಯವನ್ನಾಗಿ ಪ್ರಸ್ತಾಪಿಸಿ ವಾಗ್ದಾಳಿ ನಡೆಸಿದ್ದರು. ಅಧಿಕಾರ ಹಂಚಿಕೆಯಾಗಲು ಸ್ಟಿಂಗ್ ಆಪರೇಷನ್ ಕೂಡ ಕಾರಣ ಎಂದು ಗಂಭೀರ ಆರೋಪ ಮಾಡಿದರು.



ಕಾಂಗ್ರೆಸ್‌ನಲ್ಲೇ ಸಿದ್ದರಾಮಯ್ಯ ಅವರ ಧ್ವನಿ ಅಡಗಿಸಲು ಸ್ಟಿಂಗ್ ಆಪರೇಷನ್ ಅಸ್ತ್ರ ಬಳಸಲಾಗಿದೆ ಎಂಬ ಟೀಕೆಗಳಿವೆ. ಅದಕ್ಕೆ ಪೂರಕ ಎಂಬಂತೆ ಇಲ್ಲಿವರೆಗೂ ಸಿದ್ದರಾಮಯ್ಯ ಅವರು ಬಹಿರಂಗವಾಗಿ ಎಲ್ಲಿಯೂ ಸಂಚನ್ನು ಅಲ್ಲಗಳೆದು ಹೇಳಿಕೆ ನೀಡಿಲ್ಲ. ಸಾಮಾಜಿಕ ಜಾಲತಾಣದಲ್ಲಿ ಒಂದಿಷ್ಟು ಸ್ಪಷ್ಟನೆಗಳನ್ನು ನೀಡಿದ್ದು ಹೊರತು ಪಡಿಸಿದರೆ, ಉಳಿದೆಲ್ಲವೂ ಮುಗುಮಾಗಿದೆ.

ಕಾಂಗ್ರೆಸ್‌ನ ಒಳಗೊಳಗೆ ಸಿದ್ದರಾಮಯ್ಯ ಅವರ ಬಣ ಮತ್ತು ಡಿ.ಕೆ.ಶಿವಕುಮಾರ್ ಬಣದ ನಡುವೆ ಸ್ಟಿಂಗ್ ಆಪರೇಷನ್‌ನ ಸಂಘರ್ಷಗಳು ಬೂದಿ ಮುಚ್ಚಿದ ಕೆಂಡದಂತಾಗಿವೆ. ಈ ನಡುವೆ ಹೈಕಮಾಂಡ್ ನಾಯಕರಿಗೂ ರಾಜ್ಯ ರಾಜಕಾರಣದ ಗೊಂದಲಗಳ ಬಗ್ಗೆ ವರದಿ ತಲುಪಿದೆ. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಶೀಘ್ರವೇ ಮತ್ತೊಂದು ಸುತ್ತು ದೆಹಲಿಗೆ ಭೇಟಿ ನೀಡಿ ಸ್ಟಿಂಗ್ ಆಪರೇಷನ್ ಬಗ್ಗೆ ದಾಖಲೆಗಳ ಸಹಿತ ವರದಿ ನೀಡಲಿದ್ದಾರೆ ಎಂದು ಹೇಳಲಾಗುತ್ತಿದೆ.ಸರ್ಕಾರಿ ಯೋಜನೆ ನೋಡಿ

Publisher and Owned by CHANDRAKANTA From Near Durgamma Temple Dyampur, Koppal District- 583232 Printed at VINAYA Printers, VINAYA Publication Word No.01 Ballary Pootwer, Bhagynagar, Koppal- 583238, Editor : CHANDRAKANTA enammadhruthinews@gmail.com